ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೭, ಡಿಸೆಂಬರ್ ೨೦೧೬

ನಿಮ್ಮ ಬಾಂದಳದಲ್ಲಿ ಕನ್ನಡದ ಮನವಿರಲಿ

೨೦೧೬ ರಲ್ಲಿ, ಹೊರನಾಡ ಚಿಲುಮೆಯನ್ನು ಕೈಹಿಡಿದು ನಡೆಸಿದ ಬರಹಗಾರರಿಗೆ, ಓದುಗರಿಗೆ, ಪೋಷಕರಿಗೆ ಧನ್ಯವಾದಗಳು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೪

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೬

ಕಥೆ

ಮಲ್ಲಿಗೆ ವನ ಮತ್ತು ಅಮ್ಮನ ತವರು

ಪುಟ ೧೫

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಮತ್ತೊಂದು ವರುಷವು ಕಳೆದು,ಬರಲಿರುವ ವರುಷವನ್ನು ಸ್ವಾಗತಿಸುವ ಹೊಸ್ತಿಲಿನಲ್ಲಿದ್ದೀವಿ. ಈ ಸಮಯದಲ್ಲಿ ಹೊರನಾಡ ಚಿಲುಮೆಯೆಂಬ ಹೊರನಾಡಿನಲ್ಲಿರುವ ಕನ್ನಡ ಮನಗಳ ಒಂದು ಪುಟ್ಟ ಪ್ರಯತ್ನವಾದ ಇ-ಮಾಸ ಪತ್ರಿಕೆಗೆ ಉಸಿರು ತುಂಬುತ್ತಿರುವ ಬರಹಗಾರರು, ಓದುಗರು ಮತ್ತು ಪೋಷಕರಿಗೆ ಸಂಪಾದಕೀಯ ಸಮಿತಿಯು ಕೃತಜ್ಞತೆಯ ಭಾವದಿಂದ ಧನ್ಯವಾದಗಳನ್ನು ಅರ್ಪಿಸುತ್ತದೆ.

ಪ್ರತಿಯೊಂದು ಸಂಚಿಕೆಯಲ್ಲೂ ಕನ್ನಡ ಭಾಷೆಗೆ ನಿಮ್ಮನ್ನು ನೀವು ಅರ್ಪಿಸಿಕೊಂಡು ನಿಮ್ಮದೇ ಆದ ಈ ಮಾತೃಭಾಷೆಯನ್ನು ಬೆಳೆಸಿ, ಪೋಷಿಸಿ ಎಂದು ಕರೆಕೊಡುತ್ತಿರುವುದು ಸ್ವಸ್ತಿಮಂತ್ರದಂತೆ ಸದ್ಭಾವದಿಂದ ನಮ್ಮೊಳಗೇ ಅನುರಣನಗೊಳ್ಳಲಿ ಎಂದು. ಇಂತಹ ಕಳಕಳಿಯನ್ನು ಬಹಳ ಮೆಚ್ಚುಗೆಯಿಂದ ಸ್ವೀಕರಿಸಿ, "ನಾನು ಈಗ ಮೊಬೈಲಿನಲ್ಲಿ ಕನ್ನಡದಲ್ಲಿ ಟೈಪ್ ಮಾಡಬಲ್ಲೆ. ಇಮೇಲನ್ನು ಕನ್ನಡದಲ್ಲಿ ಬರೆಯಬಲ್ಲೆ, ನಾನು ಈ ಲೇಖನವನ್ನು ಬರೆಯಲು ಹೊರನಾಡ ಚಿಲುಮೆಯೇ ಕಾರಣ ..." ಹೀಗೆ, ಹಲವಾರು ಓದುಗರು, ಬರಹಗಾರರು ತಿಳಿಸಿದಾಗ ಸಂಪಾದಕೀಯ ಸಮಿತಿಯ ಕಾಯಕಕ್ಕೆ ಸಾರ್ಥಕ್ಯದ ಮುಗುಳ್ನಗೆ ಸಿಗುತ್ತದೆ. ಈ ವರ್ಷದಲ್ಲಿ ಇದಕ್ಕೊಂದು ಹೊಸ ಸೇರ್ಪಡೆಯೆಂದರೆ ಕನ್ನಡದಲ್ಲಿ ದಿನಸಿ ಪಟ್ಟಿಯನ್ನು ಬರೆಯುವುದು. ಇದರಲ್ಲೇನು ವಿಶೇಷ ಎನ್ನುತ್ತೀರಾ. ಖಂಡಿತ ಇದೆ. ಒಮ್ಮೆ ನೀವು ಪ್ರಯತ್ನಿಸಿ ನೋಡಿ.

ದಿನನಿತ್ಯದ ಸಾಮಾನುಗಳು ಬಹುತೇಕ ಆಂಗ್ಲಮಯವಾಗಿದೆ. ಅದನ್ನೂ ನಾವೇ ರೂಢಿಸಿಕೊಂಡದ್ದು. ಇಲ್ಲಿ ಸರಿತಪ್ಪುಗಳ ಚರ್ಚೆ ಬೇಡ. ಅಕ್ಕಿ, ಎಣ್ಣೆ, ಉಪ್ಪು, ಕಾಯಿ-ಪಲ್ಲೆ ಎಂದು ಬರೆಯುತ್ತಿದ್ದ ನಾವುಗಳು, ರೈಸ್, ಆಯಿಲ್, ಸಾಲ್ಟ್, ಸ್ನಿನಾಚ್, ಫ್ರೂಟ್ಸ್ ಎಂದು ನೆನಪಿನಲ್ಲಿ ಇಟ್ಟುಕೊಳ್ಳಲು ಶುರುಮಾಡಿದ್ದೀವಿ. ಈ ದಿನನಿತ್ಯದ ವಸ್ತುಗಳನ್ನು ನಾವು ನಮ್ಮ ಭಾಷೆಯಾದ ಕನ್ನಡದಲ್ಲಿ ಬರೆದುಕೊಳ್ಳಲು ಶುರುಮಾಡಿದರೆ, ನಮ್ಮ ದಿನನಿತ್ಯದ ಬಳಕೆಯಲ್ಲಿ ಅದು ಸೇರಿಕೊಂಡು ಕನ್ನಡ ಭಾಷೆಯ ಬಳಕೆಯು ಮತ್ತಷ್ಟು ಹೆಚ್ಚುತ್ತದೆ. ನೀವು ಇದನ್ನು ಉಪಯೋಗಿಸಿದರೆ, ನಿಮ್ಮ ಮಕ್ಕಳಿಗೂ ಆ ಪದಗಳ ಪರಿಚಯ ಮುಂದುವರಿಯುತ್ತದೆ. ಮೊಬೈಲ್, ಇಮೇಲ್ ಗಳಲ್ಲೇ ಕನ್ನಡವನ್ನು ಉಪಯೋಗಿಸಿವುದನ್ನು ಕಲಿತಿದ್ದೀವಿ. ಇನ್ನು ಇದು ಯಾವ ಮಹಾ.

ಮುಂದಿನ ಬಾರಿ ನೀವು ಖರೀದಿಗೆ ಹೋಗುವಾಗ ಮಾಡಿಕೊಳ್ಳುವ ನೆನಪು ಪಟ್ಟಿಯನ್ನು ಕನ್ನಡದಲ್ಲಿ ಮಾಡಿ, ನಿಮಗಾದ ಅನುಭವವನ್ನು ನಮ್ಮೊಡನೆ ಹಂಚಿಕೊಳ್ಳುತ್ತೀರಿ ಎನ್ನುವ ಭರವಸೆ ನಮಗಿದೆ. ನಿಮ್ಮ ಆ ಅನುಭವವನ್ನು ಓದಿ ಪುಳಕಗೊಳ್ಳುವ ಸಮಯ ೨೦೧೭ ರಲ್ಲಿ ಬೇಗನೆ ಬರಲಿ ಎಂದು ಆಶಿಸುತ್ತ, ಹೊಸವರುಷದ ಶುಭ ಹಾರೈಕೆಯೊಂದಿಗೆ ೨೦೧೬ ಕ್ಕೆ ಬೀಳ್ಕೊಡುತ್ತಿದ್ದೀವಿ ▪

ಎರಡು ತಿಂಗಳ ಪ್ರಮುಖ ದಿನಗಳು

ಡಿಸೆಂಬರ್ ಶ್ರೀ ದುರ್ಮುಖಿ ನಾಮ ಸಂವತ್ಸರ,
ದಕ್ಷಿಣಾಯಣ, ಹೇಮಂತ ಮಾರ್ಗಶಿರ/ಪುಷ್ಯ ಮಾಸ

01 ಗು - ವಿಶ್ವ ಏಡ್ಸ್ ದಿನ
10 ಶ – ಮೋಕ್ಷದ ಏಕಾದಶಿ/ಗೀತಾ ಜಯಂತಿ
12 ಸೋ – ಹನುಮ ಜಯಂತಿ/ಈದ್ ಮಿಲಾದ್
13 ಮಂ – ಹೊಸ್ತಿಲ ಹುಣ್ಣಿಮೆ/ದತ್ತ ಜಯಂತಿ
14 ಬು – ಹುತ್ತರಿ ಹಬ್ಬ/ವಿಷ್ಣು ದೀಪೋತ್ಸವ
17 ಶ - ಸಂಕಷ್ಟ ಚತುರ್ಥಿ
24 ಶ - ಕ್ರಿಸ್ ಮಾಸ ಮುನ್ನಾ ದಿನ
25 ಭಾ - ಕ್ರಿಸ್ ಮಸ್ / ಸಫಲಾ ಏಕಾದಶಿ
28/29 ಅಮಾವಾಸ್ಯೆ

ಜನವರಿ ಶ್ರೀ ದುರ್ಮುಖಿ ನಾಮ ಸಂವತ್ಸರ
ದಕ್ಷಿಣ/ಉತ್ತರಾಯಣ ಪುಷ್ಯ/ಮಾಘ ಮಾಸ

01 ಭಾ - ಆಂಗ್ಲ ಹೊಸ ವರ್ಷ
09 ಸೋ - ಪೌಷ ಪುತ್ರದ ಏಕಾದಶಿ
12 ಗು - ಪೌಷ ಹುಣ್ಣಿಮೆ
14 ಶ - ಮಕರ ಸಂಕ್ರಾಂತಿ,
ಉತ್ತರಾಯಣ ಪುಣ್ಯಕಾಲ ಆರಂಭ
15 ಭಾ - ಸಂಕಷ್ಟ ಚತುರ್ಥಿ
23 ಸೋ - ಷಟಿಲ ಏಕಾದಶಿ
28 ಶ - ಮೌನೀ ಅಮಾವಾಸ್ಯೆ
29 - ಭಾ - ಮಾಘ ಮಾಸ ಆರಂಭ

ಸಿಡ್ನಿಯಲ್ಲಿ ಕಳೆದ ಎರಡು ವರ್ಷಗಳಿಂದ ನಡೆದುಬಂದ "ಕನಕ ನಮನ" ಬರಿಯ ಕನಕದಾಸರ ಕೃತಿಗಳಿಗೆ ಮೀಸಲಿದ್ದ ಕಾರ್ಯಕ್ರಮವು ಈ ಬಾರಿಯಿಂದ ಉಳಿದೆಲ್ಲಾ ದಾಸ- ಶರಣರು ನಮ್ಮ ನಾಡಿಗೆ ನೀಡಿದ ಸಾಹಿತ್ಯ-ಸಂಗೀತದ ಕೊಡುಗೆ ನೆನೆಯುವ, ಸವಿಯುವ ಒಂದು ವಿಶೇಷ ಕಾರ್ಯಕ್ರಮವಾಗಿತ್ತು. ಹತ್ತಾರು ಗಾಯಕರು ಆರಿಸಿದ ಅಪರೂಪದ ಹಾಗು ಪರಿಚಿತವಾದ ಕೀರ್ತನೆಗಳನ್ನೂ ಶರಣರ ವಚನಗಳನ್ನೂ ಇಂಪಾದ ಸಂಗೀತಕ್ಕೆ ಅಳವಡಿಸಿ ಕೇಳುವ ಭಾಗ್ಯವೊಂದೇ ಅಲ್ಲದೆ ಆ ರಚನಕಾರರ ಪರಿಚಯ, ಹಿನ್ನೆಲೆ, ಆ ಕಾಲಕ್ಕೆ ಆದ ಘಟಣೆ ಇವೆಲ್ಲದರ ಮಾಹಿತಿಯೂ ತಿಳಿಯುವ ಅವಕಾಶವಾಯಿತು.

ಕುಮಾರಿ ಆಸ್ತಾ ಹಾಡಿದ "ಇಷ್ಟು ದಿನ ಈ ವೈಕುಂಠ" ಸೊಗಸಾದ ಕೀರ್ತನೆಯೊಂದಿಗೆ ನಾಂದಿಯಾದ ನಮನ ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ರಾಮ ಕುಡುವಾ, ಪಕ್ಕವಾದ್ಯವಾದ ತಬಲದೊಂದಿಗೆ ಶ್ರೀ ವೆಂಕಟ್ ಅವರೊಂದಿಗೆ ಮುಂದಿನ ಮೂರೂ ಕೀರ್ತನೆಗಳು ಹಾಗು ಒಂದು ಅಕ್ಕನವರ ವಚನ ಹಾಡಿದರು. ಶ್ರೀ ರಾಮ ಅವರು ಹಾಡಿದ ಜಗನ್ನಾಥ ವಿಠಲ ದಾಸರ "ಶ್ರೀ ನಿಕೇತನಾ" ಕಾರ್ಯಕ್ರಮದ ಗುಣಮಟ್ಟವನ್ನು ಆರಂಭದಲ್ಲೇ ಉತ್ತುಂಗಕ್ಕೇರಿಸಿತು.

ಪುಟ್ಟ ಮಕ್ಕಳಾದ ಚಿ। ಆರ್ಯನ್ "ಇಕ್ಕೋ ನೋಡು ರಂಗನಾಥನ ಪುಟ್ಟ ಪಾದವ" ಚಪ್ಪಾಳೆ ಮೂಲಕ ಪ್ರೇಕ್ಷಕರು ತಾಳ ಹಾಕುವಂತೆ ಮಾಡಿದರೆ, ಚಿ| ಸ್ಕಂದ ಕ್ಲಿಷ್ಟ ಸಾಹಿತ್ಯದ "ದಾಸನಾಗು ವಿಶೇಷನಾಗು" ಸುಲಭ ಸರಳ ಹಾಗು ಸುಶ್ರಾವವಾಗಿ ಹಾಡಿದನು. ಇಂಪಾದ ಕಂಠದಿಂದ ಕು ಸಿಂಧು ಬಸವಣ್ಣನವರ "ಕಂಡಿದೆನಯ್ಯಾ ನಿನ್ನ ನೋಡುವರಿಲ್ಲದೆ" ವಚನ ವಲಚೆ ರಾಗದಲ್ಲಿ ಮತ್ತು ಕನಕದಾಸರ "ಸಜ್ಜನರ ಸಂಗದೊಳು ಇರಿಸೆನ್ನ ರಂಗ" ಬೇಹಾಗ್ ರಾಗದಲ್ಲಿ ಹಾಡಿ ಸಂಗೀತದ ಪುಟ್ಟ ಅಲೆ ಎಬ್ಬಿಸಿದಳು.

ಸುಗಮ ಕನ್ನಡ ವೇದಿಕೆಗೆ ಹೊಸ ಪರಿಚಯ ಆದವರ ಪೈಕಿ ಮೂವರು ಗಾಯಕರು ಕೇಳುಗರ ಮನ ಸೂರೆಗೊಂಡರು. ಶ್ರೀಯುತರಾದ ಶ್ರೀನಿವಾಸ ರಾವ್ ಮತ್ತು ವಿಕಾಸ್ , ಶ್ರೀಮತಿ ಶ್ರುತಿ ಕುಲಕರ್ಣಿ ಒಳ್ಳೆಯ ಗಾಯಕರ ಮಾಲೆಗೆ ಪೋಣಿಸಿದ ಮುತ್ತುಗಳೆನಿಸಿದರು, ಎಲ್ಲರ ಮೆಚ್ಚುಗೆ ಪಡೆದರು. ಶ್ರೀನಿವಾಸ ರಾವ್ ವಿಜಯದಾಸರ "ನಿನ್ನ ಒಲುಮೆಯಿಂದ " ಎಂಬ ಹಾಡನ್ನು ಹಾಡುವುದರ ಜೊತೆಗೆ ಹಾಡಿನ ಹಿನ್ನೆಲೆ ಮತ್ತು ವಿಜಯ ದಾಸರ ಕಿರು ಪರಿಚಯವನ್ನೂ ಮಾಡಿಕೊಟ್ಟರು. ಮಾಧುರ್ಯಕ್ಕೆ ಹೇಳಿ ಮಾಡಿಸಿದ ಕಂಠ ವಿಕಾಸ್ ಅವರದ್ದು, ಅವರು "ರೋಗಹರನೇ ಕೃಪಾ ಸಾಗರ " ಶ್ರೀ ಜಗನ್ನಾಥ ವಿಠಲರ ರಚನೆ ಹಾಡಿದರೆ ಶ್ರೀಮತಿ ಶ್ರುತಿ "ಬಂದನೋ ಗೋವಿಂದ " ವ್ಯಾಸ ತತ್ವಾಂಗ ತೀರ್ಥರ ರಚನೆ ಸೊಗಸಾಗಿ ಹಾಡಿದರು. ಎಲ್ಲರ ನೆಚ್ಚಿನ ಗಾಯಕಿ ಕು। ಆಸ್ತಾ ಮತ್ತೆ ವೇದಿಕೆ ಅಲಂಕರಿಸಿ ಕೀಬೋರ್ಡ್ ಹಾಗೂ ಎಲೆಕ್ಟ್ರಾನಿಕ್ ತಬಲ ಜೊತೆಗೂಡಿ ಪ್ರಸನ್ನ ವೆಂಕಟ ದಾಸರ "ಹನುಮಂತಾ ಹನುಮಂತಾ" ಎಂಬ ಸೊಗಸಾದ ಕೀರ್ತನೆ ಹಾಡಿದಳು. ನಂತರ ಶ್ರೀ ಮನೋಜ್ ದೇಸಾಯ್ ಹಾಡಿದ ಕನಕದಾಸ ವಿರಚಿತ "ತಾನು ನಿನ್ನದು" ಮತ್ತು ಶ್ರೀ ಶ್ರೀನಿವಾಸನ್ ಅವರ ಮತ್ತೊಂದು ಕನಕದಾಸರ ಸುಪ್ರಸಿದ್ಧ ರಚನೆ "ಈಶ ನಿನ್ನ ಚರಣ" ಭಜನೆಯ ಒಂದು ವಿಭಿನ್ನ ಶೈಲಿಯಲ್ಲಿ ಪ್ರಸ್ತುತಪಡಿಸಿದರು. ದೇವರಿಗೆ ಆರತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಅಂತ್ಯಕ್ಕೆ ಬಂದಿತು. ಗಾಯನದ ನಡುವೆ ಶ್ರೀ ನಾಗಶೈಲ ಕುಮಾರ್ ಅವರು ತಿಳಿಸಿಕೊಟ್ಟ "ವಾತಾಪಿ ಗಮಪತಿಂ" ಬಗ್ಗೆಯ ಕರ್ನಾಟಕ ನಂಟಿನ ವಿಷಯ. ಶತಾವಧಾನಿ ಗಣೇಶ್ ಅವರ "ಕರ್ನಾಟಕ ಸಂಗೀತ" ಎನ್ನುವ ಶಬ್ದದ ವಿಚಾರದ ಒಂದು ವಿಡಿಯೋ ಪ್ರದರ್ಶನ, ಶ್ರೀಯುತರಾದ ಅಶೋಕ್, ಕನಕಾಪುರ ನಾರಾಯಣ ಅವರ ವಿಶ್ಲೇಷಣೆ, ವಿಸ್ತಾರವಾದ ಭಕ್ತಿ ಸಂಗೀತ ಮತ್ತು ದಾಸ- ಶರಣ ಸಾಹಿತ್ಯದ ಮೆಲಕು ಮನಸ್ಸಿನಲ್ಲಿ ಮಂಥನ ಮೂಡಿಸಿದರೆ ನಂತರದ ಭೋಜನ ಉದರಕ್ಕೂ ಮುದ ನೀಡಿತು. ▪

ಸಿಡ್ನಿ ಕನ್ನಡ ಶಾಲೆ – ವಾರ್ಷಿಕೋತ್ಸವದ ವರದಿ

ಸ್ಮಿತಾ ಮೇಲ್ಕೋಟೆ

ಸಿಡ್ನಿ ಕನ್ನಡ ಶಾಲೆಯ ವತಿಯಿಂದ ಡಿಸೆಂಬರ್ ಹನ್ನೊಂದು ತೂಂಗಾಬಿ ಈಸ್ಟ್ ಶಾಲೆಯ ಆವರಣದಲ್ಲಿ, ಕನ್ನಡ ಶಾಲೆಯ ವಾರ್ಷಿಕೋತ್ಸವ ಏರ್ಪಡಿಸಿತ್ತು.

ಮುಖ್ಯ ಅಥಿತಿಯಾಗಿ ಬಂದ ಶ್ರೀಮತಿ ಶಾಂತ ಶೆಟ್ಟಿ ಮತ್ತು ಸರಸ್ವತಿಯವರು ಸಮಾಜ ಸೇವೆಯಲ್ಲಿ ಎತ್ತಿದ ಕೈ. ಮುಖ್ಯ ಅತಿಥಿಗಳು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಶ್ರೀಯುತ ನಾರಾಯಣ್ ರವರು ಕಾರ್ಯಕ್ರಮವನ್ನು ಆರಂಭಿಸಿ, ಸಭಿಕರಿಗೆ ಸ್ವಾಗತ ಕೋರಿ, ಕನ್ನಡ ಶಾಲೆಯ ಮತ್ತು ಮಕ್ಕಳ ಬೆಳವಣಿಗೆ ಬಗ್ಗೆ ಒಂದೆರಡು ಮಾತನಾಡಿದರು. ನಂತರ ಪ್ರತಿಭಾ ದೀಪಕ್ ಕಾರ್ಯಕ್ರಮದ ನಿರ್ವಹಣೆ ಹೊತ್ತರು. ತಮ್ಮ ಇಂಪಾದ ಕಂಠದಿಂದ ಮಕ್ಕಳನ್ನು ವೇದಿಕೆಗೆ ಬರಮಾಡಿಕೊಂಡು, ಅವರ ಹಾಡು ಮತ್ತು ನೃತ್ಯವನ್ನು ಶ್ಲಾಘಿಸಿದರು.

ಲಿವರ್ಪೂಲ್ ಮತ್ತು ತೂಂಗಬಿ ಶಾಲೆಯ ಮಕ್ಕಳು ಮನೆಯಲ್ಲಿಯೇ ತಯಾರಿ ಮಾಡಿಕೊಂಡಿದ್ದ ಹಾಡು ಮತ್ತು ನೃತ್ಯ ಮಾಡಿ, ಅಲ್ಲಿ ನೆರೆದಿದ್ದವರ ಮನರಂಜಿಸಿದರು. ಮಕ್ಕಳೆಲ್ಲರೂ ಗುಂಪಾಗಿ ತಿಂಡಿ ಹಾಡೊಂದನ್ನು ಬಹಳ ರಸಭರಿತವಾಗಿ ಹಾಡಿದರು. ಅದರಲ್ಲಿದ್ದ ಸರ್ವ ತಿಂಡಿ ಹೆಸರುಗಳನ್ನೂ ಕೇಳಿ, ಬಾಯಿ ನೀರೂರಿಸಿ, ಹೊಟ್ಟೆ ತಾಳ ಹಾಕಲು ಮರೆಯಲಿಲ್ಲ.

ಶಾಲೆಯ ಪ್ರತಿಯೊಂದು ಮಗುವೂ ಸಂಭ್ರಮದಿಂದ ತನ್ನ ಪ್ರತಿಭೆಯನ್ನು ಎಲ್ಲರ ಮುಂದೆ ಬಿಚ್ಚಿಟ್ಟಿತ್ತು. ಮಕ್ಕಳ ಧೈರ್ಯ ಮತ್ತು ಆತ್ಮಸ್ಥೈರ್ಯ ನೋಡಿದ ಪೋಷಕರ ಮತ್ತು ಶಿಕ್ಷಕರ ಮನಸ್ಸು ನಿಜವಾಗಲೂ ಗರಿಗೆದರಿತ್ತು.

ಕನ್ನಡ ಭಾಷೆಯ ಅಂತಿಮ ಪರೀಕ್ಷೆ ಬರೆದು ಉತ್ತೀರ್ಣರಾದ ಮಕ್ಕಳಿಗೆ ಶಾಲೆಯ ವತಿಯಿಂದ ಬಹುಮಾನ ವಿತರಣೆಯಾಯಿತು. ಪರೀಕ್ಷೆ ಬರೆದ ಮಕ್ಕಳು, ವೇದಿಕೆಗೆ ಅನುಭವ ಹಂಚಿಕೊಂಡರು. ಸ್ಪಷ್ಟವಾಗಿ ಮಾತಾಡಿ ಎಲ್ಲರ ಮೆಚ್ಚುಗೆ ಕೂಡ ಗಳಿಸಿದರು.

ಇನ್ನೊಂದು ಸ್ವಾರಸ್ಯಕರ ವಿಷಯವೆಂದರೆ, ಲಿವರ್ಪೂಲ್ ಶಾಲೆಯ ಮಕ್ಕಳು " ಭಾಳ ಒಳ್ಳೆಯವರು ನಮ ಮಿಸ್ಸು " ಹಾಡಿಗೆ ಹೆಜ್ಜೆ ಹಾಕಿ, ಕೊನೆಯಲ್ಲಿ ತಮ್ಮ ಶಿಕ್ಷಕರನೆಲ್ಲಾ ಜೊತೆಗೆ ಕರೆದೊಯ್ದು ಅವರ ಮಧ್ಯೆ ನೃತ್ಯ ಮಾಡಿ, ಎಲ್ಲರ ಕಣ್ಣು ಮನ ತುಂಬುವ ಹಾಗೆ ಮಾಡಿದರು .

ಶಾಲೆಯ ಶಿಕ್ಷಕರಿಗೂ ಕೂಡ ಕನ್ನಡ ಶಾಲೆಯ ಪರವಾಗಿ ಕಾಣಿಕೆಯನ್ನು ಕೊಡಲ್ಪಟ್ಟಿತು. ವಾರಾಂತ್ಯ ಕೆಲಸ ಮಾಡುವ ಶಿಕ್ಷಕರೆಲ್ಲಾ ಸ್ವಇಚ್ಛೆಯಿಂದ ಬಂದು ಭಾಷೆ ಮೇಲಿರುವ ಅಭಿಮಾನವನ್ನು ಮಕ್ಕಳಿಗೆ ಧಾರೆ ಎರೆಯುತ್ತಿರುವವರೆ. ಅದನ್ನು ಗುರುತಿಸಿ ಶ್ರೀಯುತ ಕನಕಪುರ ನಾರಾಯಣ್ ರವರು ಮೆಚ್ಚುಗೆ ವ್ಯಕ್ತ ಪಡಿಸಿದರು.

ಮಕ್ಕಳ , ಪೋಷಕರ ಮತ್ತು ಅಧ್ಯಾಪಕರ ಶ್ರಮ , ಸಾರ್ಥಕತೆಗೆ ಕನ್ನಡಿ ಹಿಡಿದಂತೆ ಈ ಕಾರ್ಯಕ್ರಮ ಮುಗಿಯಿತು.

ಬೇಸಿಗೆಯ ಧೀರ್ಘ ರಜದ ಮಜವನ್ನು ಎದುರು ನೋಡುತ್ತಾ ಮಕ್ಕಳು ಕುಣಿದಾಡುತ್ತಾ ಹೊರಟರು. ▪

ಸಿಡ್ನಿ ಕನ್ನಡ ಶಾಲೆಯ ವಾರ್ಷಿಕೋತ್ಸವ ಸಮಾರಂಭದ ಛಾಯಾ ಚಿತ್ರಗಳು ಮುಂದಿನ ಪುಟದಲ್ಲಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಸಿಡ್ನಿ ಕನ್ನಡ ಶಾಲೆಯ ವಾರ್ಷಿಕೋತ್ಸವ

ಸಮಾರಂಭದ ಛಾಯಾ ಚಿತ್ರಗಳು



ಏನು ಜೀವನದರ್ಥ? ಏನು ಪ್ರಪಂಚಾರ್ಥ? |
ಏನು ಜೀವಪ್ರಪಂಚಗಳ ಸಂಬಂಧ? ||
ಕಾಣದಿಲ್ಲಿರ್ಪುದೇನಾನುಮುಂಟೆ? ಅದೇನು? |
ಜ್ಞಾನಪ್ರಮಾಣವೇಂ?-ಮಂಕುತಿಮ್ಮ ||

ಕಾಣದಿಲ್ಲಿರ್ಪುದೇನಾನುಮುಂಟೆ=ಕಾಣದೆ+ಇಲ್ಲಿ+ಇರ್ಪುದು+ಏನಾನುಂ(ಏನಾದರೂ)+ಉಂಟೆ.
ಇರ್ಪುದು=ಇರುವುದು, ಏನಾನುಂ=ಏನಾದರೂ.

"ಈ ನಮ್ಮ ಜೀವನಕ್ಕೆ ಏನಾದರೂ ಅರ್ಥ ಇದೆಯೇ? ನಾವಿರುವ ಈ ಪ್ರಪಂಚದ ಅರ್ಥವೇನು? ನಮ್ಮ ಮತ್ತು ನಾವು ಇರುವ ಈ ಪ್ರಪಂಚದ ಪರಸ್ಪರ ಸಂಬಂಧವೇನು? ಇವೆರಡನ್ನೂ ಬೆಸೆದಿರುವ, ನಮ್ಮ ಕಣ್ಣಿಗೆ ಕಾಣದ ಒಂದು ಶಕ್ತಿ ಏನಾದರೂ ಇದೆಯೇ? ಹಾಗಿದ್ದರೆ ಅದೇನು? ಅದು ನಮ್ಮ ವಿಚಾರ ಮತ್ತು ಜ್ಞಾನದ ಪರಿಧಿಯಿಂದ ಮೀರಿದೆಯೇ? ಹಾಗಾದರೆ ಅದು ಏನು?" ಎಂಬ ಭಾವಗಳನ್ನು ವ್ಯಕ್ತಪಡಿಸುತ್ತಾರೆ ಈ ಮುಕ್ತಕದಲ್ಲಿ ಮಾನ್ಯ ಶ್ರೀ ಡಿ.ವಿ.ಜಿ.ಯವರು.

ವಾಚಕರೇ, ಅಲ್ಪ ಸ್ವಲ್ಪ ವಿಚಾರಮಾಡುವ ಶಕ್ತಿ ಇರುವವರೂ ಸಹ ಈ ರೀತಿಯ ಪ್ರಶ್ನೆಗಳನ್ನು ತಮಲ್ಲೇ ತಾವು ಅನೇಕ ಬಾರಿ ಕೇಳಿಕೊಳ್ಳುತ್ತಾರೆ. ಅಲ್ಲವೇ? ನಾವು ಹುಟ್ಟುತ್ತೇವೆ, ಬೆಳೆಯುತ್ತೇವೆ, ಬದುಕುತ್ತೇವೆ ಮತ್ತು ಒಂದು ದಿನ ಸಾವಿನ ತೆಕ್ಕೆಗೆ ಬೀಳುತ್ತೇವೆ. ಈ ಎಲ್ಲಕ್ಕೂ ಏನಾದರೂ ಅರ್ಥವಿದೆಯೇ? ನಾವು ಇಲ್ಲಿರುವಾಗ ನಮ್ಮ ಜೀವನದಲ್ಲಿ ಜ್ಞಾನದ ಜೊತೆಯಲ್ಲಿ ಪ್ರೀತಿ, ಪ್ರೇಮ, ಕೋಪ, ದ್ವೇಷ, ಅಸೂಯೆ, ಅನುರಾಗ ಮುಂತಾದ ಹಲವಾರು ಭಾವನೆಗಳನ್ನು ಬೆಳೆಸಿಕೊಳ್ಳುತ್ತೇವೆ. ಆ ಭಾವನೆಗಳ ಜೊತೆಗೆ ಜೀವಿಸುತ್ತೇವೆ. ಈ ರೀತಿಯ ಜೀವನಕ್ಕೇನಾದರೂ ಅರ್ಥವಿದೆಯೇ? ವಾಸ್ತವ ಬದುಕಿಗೆ ಮಾತ್ರ ವಾಸ್ತವವೇ ಕಾರಣವೇ ಅಥವಾ ನಮ್ಮ ಕಣ್ಣಿಗೆ ಕಾಣದ ಆದರೂ ಈ ಎಲ್ಲವನ್ನೂ ನಿಯಂತ್ರಿಸುವ ಬೇರೆ ಯಾವುದಾದರೂ ಶಕ್ತಿ ಇದೆಯೇ? ಇದ್ದರೆ ಅದರ ಸ್ವರೂಪವೇನು ಮತ್ತು ಅದರ ಕಾರ್ಯ ವೈಖರಿಯೇನು? ಎನ್ನುವುದು ಎಲ್ಲ ವಿಚಾರವಂತರಿಗೂ ಬರುವ ಸಂದೇಹಗಳು.

ಪ್ರತಿ ಜೀವಿಯ ಹುಟ್ಟು ಏಕಾಗುತ್ತದೆ? ಭೌತಿಕ ಕಾರಣವು ಎಲ್ಲರಿಗೂ ಗೊತ್ತು. ಆದರೆ ಈ ಭೌತಿಕ ಕಾರಣವಲ್ಲದೆ ಬೇರೆ ಏನಾದರೂ ಕಾರಣವಿದೆಯೇ? ಆ ಕಾರಣವೇ ನಮ್ಮ ಪ್ರತಿ ನಿಮಿಷದ ಕಾರ್ಯಗಳನ್ನೂ ನಿಯಂತ್ರಿಸುತ್ತದೆಯೇ? ನಮ್ಮ ಭಾರತೀಯ ಸಿದ್ಧಾಂತದ ಪ್ರಕಾರ ಪ್ರತಿ ಜೀವಿಯೂ ಒಂದು ಪೂರ್ವ ನಿಯೋಜಿತ ಕಾರಣಕ್ಕಾಗಿ ಜನಿಸಿ ಮತ್ತು ಆ ಪೂರ್ವ ನಿಯೋಜಿತ ಕ್ರಮದಲ್ಲಿಯೇ ತನ್ನ ಜೀವನವನ್ನು ನಡೆಸುತ್ತದೆ ಎಂದು ಹೇಳಲ್ಪಟ್ಟಿದೆ. ಹಾಗಿದ್ದರೆ ಆ ಕಾರಣದ ಮೂಲವೇನು? ಆ ಕಾರಣಕ್ಕೆ ಕಾರಕರಾರು? ಬಹಳ ಕ್ಲಿಷ್ಟವಾದ ಪ್ರಶ್ನೆ.

ನಮ್ಮ ಋಷಿ ಮುನಿಗಳೂ ಸಹ ಈ ರೀತಿಯ ಪ್ರಶ್ನೆಗಳಿಗೆ ಉತ್ತರವನ್ನು ಕಾಣಲು ಮಾಡಿದ ಪ್ರಯತ್ನದ ಫಲವೇ ಭಾರತೀಯ ವೇದಶಾಸ್ತ್ರಗಳು, ಉಪನಿಷತ್ತುಗಳು. ಹೀಗೆ ಎಲ್ಲರಲ್ಲೂ ಸಾಮಾನ್ಯವಾಗಿ ಉದ್ಭವವಾಗುವ ಮತ್ತು ಎಲ್ಲರೂ ವಿಚಾರ ಮಾಡಬಹುದಾದ ಅಥವಾ ಮಾಡಲೇಬೇಕಾದ ಪ್ರಶ್ನೆಗಳ ಸ್ವರೂಪವೇ ಈ ಮುಕ್ತಕ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಗೋರಿಗೀತೆಗಳು

ಆಂಗ್ಲದವರದು ಒಂದು ದೊಡ್ಡ ಗುಣವಿದೆ. ಅವರು ಹಾಸ್ಯವನ್ನು ಸತ್ತರೂ ಬಿಡಲ್ಲ ಎನ್ನುವುದಕ್ಕೆ ಅವರಲ್ಲಿರುವ ಎಪಿಟಾಫ್‌ಗಳೇ ಸಾಕ್ಷಿ. ಗೋರಿಯ ಮೇಲೆ ವ್ಯಕ್ತಿಯ ಬಗ್ಗೆ ಕೊರೆದ ಕೊನೆಯ ಸಾಲುಗಳಲ್ಲಿ ಅಪಾರವಾದ, ಮನಮುಟ್ಟುವಂತಹ, ಮನಮಿಡಿಯುವಂತಹ ಹಾಸ್ಯ, ವಿಡಂಬನೆಗಳಿರುತ್ತವೆ. ಕನ್ನಡದಲ್ಲಿ ಇವು ವಿರಳ. ಇದೋ ನಿಮಗಾಗಿ ಒಂದಷ್ಟು ಗೋರಿಗೀತೆಗಳು.

ಅಬಾರ್ಷನ್ ವೈದ್ಯಳ ಗೋರಿಯ ಮೇಲೆ:

ಹೆಣ್ಣಿನ ಭ್ರೂಣವ ಹೊಸಕುತ ದಿನವು
ಹೆಣ್ಣಿನ ಕುಲಕೇ ಕಂಟಕವಾದಳು
ಮಣ್ಣಲಿ ಮಲಗಿಹಳಬಾರ್ಶನಿ
ಸಲ್ಲಿಸದಿರಿ ನೀವ್ ಕಂಬನಿ

ಆಟೋ ಚಾಲಕನ ಗೋರಿಯ ಮೇಲೆ:

ಅಡ್ಡಂ ತಿಡ್ಡಂ ದುಡುದುಡು ಓಟಂ
ತಿಟ್ಟಂ ಹಳ್ಳಂ ಹಾರಿಸುವಾಟಂ
ಆಟೋ ಬಿಟ್ಟೂ ಅದೆ ಒಡ್ಡಾಟಂ
ದುಡುಂ ಗೋರಿಯ ಹಳ್ಳಕೆ ಸೇರ್ದಂ

ಆದೊಡೆಂ ಮನದೊಳೊಂದೇ ವ್ಯಸನಂ -
ಕಡೆಯ ಸವಾರಿಯೊಳ್ ಡಬಲ್ ಮೀಟರ್ ಇಲ್ಲಂ!

ಇಂಗ್ಲಿಷ್ ಟೀಚರ್ ಗೋರಿಯ ಮೇಲೆ:

ಮಿಲ್ಟನ್ ಶೆಲ್ಲಿ ಮಿಲ್ಕ್‌ಶೇಕ್ ಮಾಡಿ
ಶೆಲ್ಡನ್ ಶೇಕ್‌ಸ್ಪಿಯರ್ ಶಾಂಪೇನ್ ಕುಡಿಸಿ
ಷಲ್ಲಲಿ ಡಬಲೆಲ್ ವಿಲ್ಲಲಿ ಡಬಲೆಲ್ ಎಂದವ
ರಿಲ್ಲವು ಪ್ಯಾಸಿವ್ ವಾಯ್ಸೇ ಇವರದು ಇನ್ನೆಂದೂ

ಗಾಯಕನ ಗೋರಿಯ ಮೇಲೆ:

ಮೆಲ್ಲಮೆಲ್ಲಗೆ ಹೆಜ್ಜೆಯಿರಿಸಿರಿ
ಮಲಗಿಹನು ಗಾಯಕನು ಇಲ್ಲಿ
ಸಪ್ಪಳಕೆ ಎಚ್ಚರವು ಆದರೆ
ಅಪ್ಪಳಿಸುವ ದನಿಯಲಿ ಪಾಡ್ವನು
ಮಸಣದಲ್ಲಿಹ ಎಲ್ಲ ಶವಗಳು ಎದ್ದು ಕೂಡುವುವು

ಛಂದೋಬದ್ಧ ಕವಿಯ ಗೋರಿಯ ಮೇಲೆ:

ಸಾಂಗತ್ಯವ ಉತ್ಸಾಹದಿ ಬೋಧಿಸಿ
ಛಂದದಿ ಲಘುಗುರು ಪ್ರಾಸವ ಜೋಡಿಪ
ಛಂದದ ಕವಿಯದು ಜೀವನ ಪಥದೊಳು
ಮಂದಾಕ್ರಾಂತದಿ ಶಾರ್ದೂಲದ ಮುಂದಿನ ರಗಳೆ

ಮುಂದಿನ ಪುಟ ನೋಡಿ ...

ವ್ಯಾಕರಣ ಮೇಷ್ಟ್ರ ಗೋರಿಯ ಮೇಲೆ:

ಅಕ್ಕರೆ ಇಲ್ಲದ ಕನ್ನಡ ಜನತೆಗೆ
ಅಕ್ಕರ ಕಲಿಸುವ ಹುಚ್ಚಿಗೆ ಸಿಲುಕಿ
ಕುಕ್ಕರುಬಡಿದರು ಬಸವಳಿದು

ಸವರ್ಣ ದೀರ್ಘದ ಗುಂಗಿನೊಳಿದ್ದು
ಸುವರ್ಣ ಹೊಂದುವ ಗುಣವನೆ ಮರೆತು
ನಾರಾ ಯಣ್ ಎನುತ ಕಂತೆಯ ಒಗೆದರು

ಸಾಫ್ಟ್ ವೇರ್ ಇಂಜಿನಿಯರ್ನ ಗೋರಿಯ ಮೇಲೆ:

ಲ್ಯಾಪ್ ಟಾಪೇ ನನ್ನ ತಾಯಿತಂದೆ
ಲ್ಯಾಪ್ ಟಾಪೇ ನನ್ನ ಬಂಧುಬಳಗ
ಲ್ಯಾಪುಟಾಪನು ತಪ್ಪಿ ಮರೆತರೆ ಮೆಚ್ಚನಾ ಟೀಂ ಹೆಡ್ಡನು
ಲ್ಯಾಪ್ ಟಾಪೇ ಪರಮಾತ್ಮನೆಂಬ ಸಾ.ವೇ.ಇಂ.ನ ಕಥೆಯಿದು

ಲ್ಯಾಪು ಆಯಿತು ಧರೆಯು ಇವನಿಗೆ
ಟಾಪು ಆಯಿತು ಕಲ್ಲು ಚಪ್ಪಡಿ
ಪ್ರಾಪರ್ ಪ್ಲೆಷರಿನ ಫೈಲು ತೆಗೆಯದೆ
ಲೈಫು ಕ್ಲೋಸ್ ಆಗ್ಹೋಯಿತು
ಲೈಫೆಲ್ಲ ಫೈಲಲ್ಲೆ ಕಳೆದ ಸಾ.ವೇ.ಇಂ.ನ ಗೋರಿಯಿದು

ಟ್ರಕ್ ಡ್ರೈವರ್ನ ಗೋರಿಯ ಮೇಲೆ:

ಸಾಗುತ ದೂರ ದೂರ ನೀ
ಹಾಕಿದೆ ಗುಂಡನು ಪೂರಾ
ಟ್ರಕ್ ಚಲಿಸಿತು ಹಾವಿನ ವಕ್ರ
ಢಕ್ಕನೆ ಸಾವಿನ ದ್ವಾರ

ಸಾಮಾನ್ಯ ವೈದ್ಯನ ಗೋರಿಯ ಮೇಲೆ:

ಬಂದ ರೋಗಿಗಳೆಲ್ಲ ರೋಗವ
ಅಂದೆ ಗುಣಪಡಿಸುವೆನೆಂದ ವೈದ್ಯನು
ಸಂದ ವಿವಿಧಿಂಫೆಕ್ಷನಿಗೆ ಬಲಿಯಾಗಿ ಸೇರಿಹನಿಲ್ಲಿಗೆ.
ಉಳಿದುಹೋದರೈ ಊರ ಜನಗಳು
ಗುಳಿಗೆಗೊಂದು ಗಂಡಾಂತರ ತಪ್ಪಿ
ಸುಳಿಯದಿನ್ನು ಸಾವು ಸನಿಹ ವಾರವಾರವು ಊರಿಗೆ

ನೇತ್ರವೈದ್ಯನ ಗೋರಿಯ ಮೇಲೆ:

ಎಲ್ಲರದು ಕಣ್ತೆರೆಸಿ ತೊಟ್ಟುಗಳ ಸುರಿದವನು
ಇಲ್ಲಿ ತಾ ಕಣ್ಮುಚ್ಚಿ ಪವಡಿಸಿಹನು
ಇಲ್ಲ ಲೆನ್ಸ್ ಹುಡುಕಾಟ, ಕನ್ನಡಕದೊಡನಾಟ
ಇಲ್ಲಿಹುದೊಂದೇ ಲೆನ್ಸು; ಅದುವೇ ಸೈಲೆನ್ಸು.

ಮುಂದಿನ ಪುಟ ನೋಡಿ ...

ಸರ್ಜನ್‌ನ ಗೋರಿಯ ಮೇಲೆ:

ಆಪರೇಷನಿನ ಗಂಧವೆ ಇಲ್ಲದೆ
ಪಾಪದ ರೋಗಿಯ ಕೊಯ್ಯುತಲಿದ್ದನೊ
ಕೂಪದಿನೇಳದ ರೀತಿಯು ಸುತ್ತಲು
ಜಪ್ಪಿಸಿ ಗೋರಿಗೆ ಹೊಲಿಗೆಯ ಹಾಕಿಹೆವು

ಕಾರ್ಪೆಂಟರ್ನ ಗೋರಿಯ ಮೇಲೆ:

ಯೋಗದಿ ಪ್ರಾಣಾಯಾಮವ ಮಾಡಲು
ಮೂಗನು ಪಿಡಿದನು ಬೆರಳುಗಳೊಳ್
ಬೆರಳುಗಳವುವೋ ಫೆವಿಕಾಲ್ ಮಯವು
ಬೆರಳಿನ ಹಿಡಿತದಿ ನಾಸಿಕ ಸಿಲುಕಿ
ಹೊರಟು ಹೋದ ಬಡಪಾಯಿ ಬಡಗಿ

ಲಂಚಗುಳಿ ನೌಕರನ ಗೋರಿಯ ಮೇಲೆ:

ಎಷ್ಟು ಯತ್ನವನು ಮಾಡಿದರೇನು
ಹುಟ್ಟುಗುಣವದು ಹೋಗುವುದೇನು
ಇಟ್ಟರು ದೇಹವ ಗೋರಿಯ ಒಳಗಡೆ
ನೆಟ್ಟನೆ ಚಾಚಿಹುದೈ ಕೈ ಹೊರಗೇ
ಸುಟ್ಟರು ಹೋಗದು ಲಂಚದ ಗುಣವು.

ರಾಜಕಾರಣಿಯ ಗೋರಿಯ ಮೇಲೆ:

ಡ್ರಮ್ಮಾಗಿಹ ದೇಹ ಹೊತ್ತು
ಸ್ಲಿಮ್ಮಾಗುವ ಆಶೆ ಬಿಟ್ಟು
ಸ್ಲಮ್ಮಲ್ಲಿನ ಜನರ ಪಿಡಿದು
ಸುಮ್ಮಾನದಿ ಮೆರೆದನೋ/ಳೋ

ಹಮ್ಮು ಬಿಮ್ಮು ಇದ್ದರೇನು
ಸೊಮ್ಮು ಎಮ್ಮು ಕಾವುದೇನು
ಢುಮ್ಮೆಂದು ಬಿದ್ದನೊ/ಳೊಮ್ಮೆ
ಡ್ರಮ್ಮು ಢಂ ಢಮಾರ್

ಶ್ರೀಸಾಮಾನ್ಯನ ಗೋರಿಯ ಮೇಲೆ:

ತೆರಿಗೆಯ ತೇರಿನ ಚಕ್ರಕೆ ಸಿಲುಕಿ
ತರತರ ಆಶ್ವಾಸನೆಯಿಂ ನಲುಗಿ
ಬರ ನೆರೆ ನೆರೆಹೊರೆ ಲಂಚಕೆ ಕರಗಿ
ಮರಣಿಸಿ ಪಡೆದನು ನೆಮ್ಮದಿ ಮನದಿ

ಮುಂದಿನ ಪುಟ ನೋಡಿ ...

ಕೆಮಿಸ್ಟ್ರಿ ಟೀಚರ್ ಗೋರಿಯ ಮೇಲೆ:

ಎನಿತೆನಿತೊ ಕೆಮಿಕಲ್ಸ ಸೇರಿಸುತ ಲ್ಯಾಬಿನಲಿ
ಅನಿತನಿತು ಹೊಸ ಸಮೀಕರಣಗಳ ಅರಿತವಗೆ
ಮನೆಯಲ್ಲಿ ಸತಿಯೊಡನೆ ಸ್ಫೋಟವೋ ಸ್ಫೋಟವೈ
ಕೊನೆಗೆ ಮಿಕ್ಸ್‌ಚರಿಂ ಬೇರ್ಪಟ್ಟ ಕೆಮಿಕಲಾದನ್

ಕಂಟ್ರಾಕ್ಟರನ ಗೋರಿಯ ಮೇಲಲ್ಲ, ಗೋರಿಯ ಬಳಿ:

ಎಚ್ಚರ! ದೊಡ್ಡವರಿರಲಿ, ಮಕ್ಕಳ ಕೈಯಿಂದಲೂ ಮುಟ್ಟಿಸಬೇಡಿರಿ. ದೂರ ನಿಲ್ಲಿರಿ. ಈ ಗೋರಿ ಇದೇ ಕಂಟ್ರಾಕ್ಟರನ ಮೇಸ್ತ್ರಿ ಕಟ್ಟಿದುದಾದ್ದರಿಂದ ಯಾವುದೇ ಕ್ಷಣದಲ್ಲಿ ಕುಸಿಯಬಹುದು.

ವಕೀಲನ ಗೋರಿಯ ಮೇಲೆ:

ಏನೇ ಯತ್ನಿಸಿದರೂ ಸಾವಿನ ದಿನಕ್ಕೆ
ಅಡ್ಜರ್ನ್‌ಮೆಂಟ್ ಪಡೆಯಲಾಗಲಿಲ್ಲ.
ಕೇಸ್ ಕ್ಲೋಸ್

ಚುಟುಕು ಕವಿಯ ಗೋರಿಯ ಮೇಲೆ:

ಇದ್ದೆ
ಸತ್ತಿದ್ದೆ
ಹೋದೆ
ಗೆದ್ದೆ

ದಂತವೈದ್ಯನ ಗೋರಿಯ ಮೇಲೆ:

ಆತ ತುಂಬಿದ ಕಟ್ಟಕಡೆಯ ಕುಳಿ ಇದು.

ಮಾಜಿ ಪ್ರಧಾನಿಯ ಗೋರಿಯ ಮೇಲೆ:

ಮಲಗಿಹರಿಲ್ಲಿ ಮಾಜಿ ಪ್ರಧಾನಿ - ಎಂದಿನಂತೆಯೇ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಚಾರ ವಿಹಾರ

ಮಾಲು, ಅಡಿಲೈಡ್

ಯತಿ ವ್ರತಿ ಪತಿವ್ರತಾ ಚ
ವೀರಶ್ಚ ಶೂರಶ್ಚ ದಯಾಪರಶ್ಚ|
ತ್ಯಾಗಿ ಚ ಯೋಗೀ ಚ ಬಹುಶ್ರುತಶ್ಚ
ಸ್ವಸಂಗಮಾತ್ರೇಣ ದಹಂತಿ ಪಾಪಂ||

ಈ ಮೇಲಿನ ಸುಭಾಷಿತ ಶ್ಲೋಕ ವಿದ್ವಾನ್ ಶ್ರೀ ಕೆ.ಜಿ.ಸುಬ್ಬರಾಯ ಶರ್ಮರ 'ಸುಭಾಷಿತ ಸಂವತ್ಸರ' ದಿಂದ ಆಯ್ದದ್ದು.
ಈ ಮೇಲಿನ ಶ್ಲೋಕದ ಅರ್ಥ ಹೀಗಿದೆ:

ಸನ್ಯಾಸಿ, ತಪಸ್ವಿ, ಪತಿವ್ರತೆ, ಧರ್ಮವೀರ, ಶೂರ, ದಯಾನಿಧಿ, ತ್ಯಾಗಿ
ಯೋಗಿ ಮತ್ತು ವೇದಾಂತಪುರುಷ - ಈ ಒಂಬತ್ತು ಮಹಾತ್ಮರು ತಮ್ಮ
ಸಂಪರ್ಕಮಾತ್ರದಿಂದ ಇತರರ ಪಾಪಗಳನ್ನು ಸುಟ್ಟು ಬೂದಿ ಮಾಡುತ್ತಾರೆ.

ಮಹಾತ್ಮರು

ಸಾವು ಮತ್ತು ಬೆಂಕಿ ಸಮವರ್ತಿ. ಸಾವು ಸಕಲ ಜೀವಿಗಳನ್ನು ಹೊತ್ತುಕೊಂಡು ಹೋಗುತ್ತದೆ. ಬೆಂಕಿ ಸಕಲವನ್ನು ನಾಶ ಮಾಡಿಬಿಡುತ್ತದೆ.

ಆದರೆ
'ನೈನಂ ಛಿಂದಂತಿ ಶಸ್ತ್ರಾಣಿ ನ ದಹತಿ ಪಾವಕಃ'
ಶಸ್ತ್ರಗಳು ಕತ್ತರಿಸಲಿಕ್ಕೆ ಆಗದಂಥ ಮತ್ತು ಬೆಂಕಿ ಸುಡಲು ಆಗದಂತಹದ್ದು ಆತ್ಮ.

ನಾವು ಮಾಡಿದ ಕುಕೃತ್ಯಗಳಿಂದ ಈ ನಮ್ಮ ಆತ್ಮಕ್ಕೆ ಪಾಪವು ಅಂಟಿಕೊಂಡಿರುತ್ತದೆ. ಆ ಪಾಪಗಳು ಮೇಲಿನ ಶ್ಲೋಕದಲ್ಲಿ ತಿಳಿಸಿದ ಒಂಬತ್ತು ಮಹಾತ್ಮರುಗಳು ನಮ್ಮ ಆತ್ಮಕ್ಕೆ ಅಂಟಿದ ಪಾಪಗಳನ್ನು ಅವರ ಸಂಪರ್ಕದಿಂದ ಸುಟ್ಟು ಹಾಕುತ್ತಾರೆ.
ಯತಿಗಳು - ಸರ್ವಸಂಗ ಪರಿತ್ಯಾಗಿಗಳು. ಆತ್ಮಜ್ಞಾನವನ್ನು ಪಡೆದಿರುವ ಸಾಧಕರು.
ವ್ರತಿಗಳು - ಬ್ರಹ್ಮಚರ್ಯವೇ ಇವರಿಗೆ ವ್ರತ. ಅಹಿಂಸೆ, ತಪಸ್ಸು, ಸಾಧನೆ, ಅನುಷ್ಠಾನ ಮತ್ತು ಶಾಂತ ಮೂರ್ತಿಗಳು.
ಪತಿವ್ರತೆ - ತನ್ನ ಪತಿಯನ್ನೇ ಸರ್ವಸ್ವವೆಂದು ಭಾವಿಸಿರುವ ಹೆಣ್ಣು. ತನ್ನ ತ್ರಿಕರಣಗಳಿಂದ ಶುದ್ಧವಾಗಿ ಸಾತ್ವಿಕ ಪತಿಯನ್ನು ಅರಾಧಿಸುವವಳು.
ವೀರ - ಸತ್ಯ, ಧರ್ಮ ಮತ್ತು ಅಹಿಂಸಾಪರನಾಗಿ ದೇಶಕ್ಕಾಗಿ ಧೈರ್ಯವಾಗಿ ಹೊರಡುವ ಮಹಾತ್ಮ.
ಶೂರ - ಮಹಾ ತಪಸ್ವಿಯಾಗಿ ನಿಷ್ಠಾವಂತನಾಗಿರುವ ಸಾಧಕ.
ದಯಾಪರ - ದೀನ ದಲಿತರನ್ನು ಕಂಡಾಗ ಅವರನ್ನು ಪ್ರೀತಿಯಿಂದ ಮಾತನಾಡಿಸಿ ಅವರಿಗೆ ಅನುಕೂಲ ಮಾಡಿಕೊಡುವವ.
ತ್ಯಾಗಿ - ಸ್ವಾರ್ಥ ಮತ್ತು ಅಹಂಕಾರಗಳನ್ನು ಬಿಟ್ಟು ಸರಳ ಜೀವನವನ್ನು ನಡೆಸುತ್ತಿರುವ ಮಹಾತ್ಮ
ಯೋಗಿ - ಯಮ ನಿಯಮಾದಿ ಸಾಧನೆಗಳಲ್ಲಿ ತೊಡಗಿ ಶಾಂತತೆಯನ್ನು ಸಾಧಿಸಿದವನು.
ಬಹುಶ್ರುತ - ಎಲ್ಲ ವೇದಗಳನ್ನು ಅಧ್ಯಯನ ಮಾಡಿದಂಥವನು
ಈ ಮೇಲಿನ ಎಲ್ಲ ಒಂಬತ್ತು ಮಹಾತ್ಮರುಗಳಲ್ಲಿ ಒಬ್ಬ ಮಹಾತ್ಮರ ಸಂಪರ್ಕವಾದರೂ ನಮಗೆ ದೊರಕಲಿ. ಸಿಕ್ಕ ಆ ಮಹಾತ್ಮ ನಮ್ಮನ್ನು ಪಾಪ ರಹಿತನಾಗಿ ಮಾಡಲಿ..

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಸುಗಮ ಕನ್ನಡ ಕೂಟದ ಆಶ್ರಯದಲ್ಲಿ
ಸುಗಮ ಗಾನ ಸಮಾಜ
ಅರ್ಪಿಸುತ್ತಿದೆ

2017 New year
Karaoke Night

ಹೊಸ -ಹಳೆಯ ಕನ್ನಡ ಚಿತ್ರಗೀತೆ, ಭಾವ ಗೀತೆ,
ಭಕ್ತಿಗೀತೆ, ಜನಪದ ಗೀತೆಗಳ ಮಿಶ್ರ ಮನರಂಜನೆ

Meet new & famous singers

ಎಲ್ಲಾ ಸದಸ್ಯರಿಗೂ ಕ್ಯಾರೆಕೋಕೆ ಹಾಡುವ ಸದಾವಕಾಶ
ತಾವೂ ಸದಸ್ಯರಾಗಬೇಕೆ? ಬೇಗ ಸಂಪರ್ಕಿಸಿ, ಭಾಗವಹಿಸಿ

Saturday
07-01-2017

Book with any one
Nagaraj 0400836415
Nagabhushan 0433763911
Narayana 0423634979
Deepak 0413607311
Shridhar 0422549695

Special guest performance by
ಶ್ರೀಮತಿ ಶಾಂತಾ. ಎಸ್. ಶೆಟ್ಟಿ
ಖ್ಯಾತ ಸುಗಮ ಸಂಗೀತ ಕಲಾವಿದರು
ಶಿವಮೊಗ್ಗ

Venue: Wattle Grove Public School,
Cressbrook Drive, Wattle Grove, NSW
Time 6:00 pm
Entry $10 Adult, $20 family
Light refreshments served free
PLEASE BOOK FOR CATERING PUPOSE

Sydney Kannada School

Conducting

Two days KANNADA Crash Course

ಇಂದು ನಾಳೆ ಎನ್ನದೇ
ಕಲಿತವನೇ ಜಾಣ

THIS IS THE BEST OPPRTUNITY TO LEARN READING AND WRITING KANNADA LANGUAGE IN IN ANY AGE

Age limit From 13 - 60 years

$30 PER PERSON (For two days includes food)

21st & 22nd January 2017

Time:10am -3pm
Lunch and snacks provided
Venue:Toogabbie East Public School, Harris street , Wentworthville NSW
To register please email to
sydneykannadaschool@gmail.com or
sugamakannada@gmail.com
FREE ACCOMODATION PROVIDED IF JOINING FROM OUTSIDE OF SYDNEY
Visit www.sugamakannada.com

ಎರಡು ಸೇಬು

ಕನಕಾಪುರ ನಾರಾಯಣ

ಆಡುವ ಮಗು ಆರುಣಿ ಕೈಯಲ್ಲಿ ಎರಡು ಸೇಬು ಹಿಡಿದು ಟಿ ವಿ ಯಲ್ಲಿ ಬರುತ್ತಿದ್ದ ಕಾರ್ಟೂನ್ ನೋಡುತ್ತಾ ಅವಳ ತಾಯಿ ಅಲ್ಲಿಗೆ ಬಂದು "ಆರುಣಿ ಎರಡು ಸೇಬು ನಿನಗೇತಕೆ? ಎಲ್ಲಿ ನನಗೊಂದು ಕೊಡು" ಎಂದಳು. ಆರುಣಿ ತನ್ನ ಬಲಗೈಯಲ್ಲಿದ್ದ ಸೇಬನ್ನು ಕೂಡಲೇ ಒಮ್ಮೆ ಕಚ್ಚಿದಳು. ಸರಿ ತಾಯಿ ಆರುಣಿಯ ಎಡಗೈಯಲ್ಲಿದ್ದ ಸೇಬಿನ ಕಡೆಗೆ ಕೈ ಚಾಚಿದಳು. ತಕ್ಷಣ ಆಕೆ ಆ ಸೇಬನ್ನೂ ಕಚ್ಚಿದಳು, ಒಮ್ಮೆ ಅಮ್ಮನ ಕಡೆ ಮುಖ ಮಾಡಿ ಮುಗುಳ್ನಕ್ಕಳು. ಅದಕ್ಕೆ ತಾಯಿ ಇರಲಿ ಮಗುವಿನ ತುಂಟತನ, ಎರಡೂ ಸೇಬು ತಿನ್ನುವ ದುರಾಸೆ ಏಕೆ ಎಂದುಕೊಂಡು ಅವಳ ಬಳಿ ಕುಳಿತು ಬುದ್ಧಿಮಾತು ಹೇಳಲು ಅಣಿಯಾದಳು. ಅಷ್ಟರಲ್ಲಿ ಮಗು "ಅಮ್ಮಾ ತಗೋ ಈ ಹಣ್ಣು ರುಚಿಯಾಗಿದೆ" ಎಂದು ಒಂದನ್ನು ಅವಳ ಕಡೆ ಹಿಡಿದಳು. ತಾಯಿಗೆ ಒಂದು ಕ್ಷಣ ತನ್ನ ಅಪಾರ್ಥದ ಅರಿವಾಯಿತು. ▪

ನುಚ್ಚಿನುಂಡೆ

ಬೇಕಾಗುವ ಸಾಮಗ್ರಿಗಳು

- ತೊಗರಿ ಬೇಳೆ ಅರ್ಧ ಕಿಲೋ
- ಕಡಲೆ ಬೇಳೆ ನೂರು ಗ್ರಾಂ
- ತೆಂಗಿನ ಕಾಯಿ ತುರಿ ಒಂದು ಲೋಟ
- ಹಸಿ ಮೆಣಸಿನ ಕಾಯಿ ಹತ್ತು, ಶುಂಟಿ - ಗೋಲಿ ಗಾತ್ರ
- ಕೊತ್ತಂಬರಿ ಒಂದು ಕಂತೆ, ಐದು ಎಳಸು ಕರಿಬೇವು
- ಜೀರಿಗೆ ಒಂದು ಚಮಚ, ಉಪ್ಪು ಒಂದೂವರೆ ಚಮಚ

ಮಾಡುವ ವಿಧಾನ

- ಬೇಳೆಗಳನ್ನು ತೊಳೆದು ನಾಲ್ಕು ಘಂಟೆ ನೆನೆಸಿ ನಂತರ ತರಿತರಿಯಾಗಿ ರುಬ್ಬಿಕೊಳ್ಳಿ
- ರುಬ್ಬಿದ ಹಿಟ್ಟಿಗೆ ತೆಂಗಿನತುರಿ,ಶುಂಟಿ,ಹ.ಮೆ.ಕಾಯಿ ಹಾಕಿ ಮತ್ತೆರುಬ್ಬಿ
- ಹೆಚ್ಚಿದ ಕೊತ್ತಂಬರಿ,ಕರಿಬೇವು,ಜೀರಿಗೆ,ಉಪ್ಪು ಸೇರಿಸಿ ಕೈ ಹಿಡಿಯಲ್ಲಿ ಉಂಡೆ ಮಾಡಿ ಇಡ್ಲಿಯಂತೆ ಹತ್ತು/ಹದಿನೈದು ನಿಮಿಷ ಹಬೆಯಲ್ಲಿ ಬೇಯಿಸಿ
- ಬೆಂದ ಉಂಡೆಗೆ ಬಿಸಿಯಲ್ಲೇ ತುಪ್ಪ ಸವರಿ ತಿನ್ನಲು ಕೊಡಿ ನೀವೂ ತಿನ್ನಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಗೋಡೆ ಮೇಲೆ ಕರ್ರಗಿನ ರೊಟ್ಟಿ

೨. ಚಿಕ್ಕ ಮನೆಗೆ ಚಿನ್ನದ ಬೀಗ

ಉತ್ತರಕ್ಕೆ ಪುಟ ೧೩ ನೋಡಿ

ಅಸಂಭವ ...

ಹರಿಯ ನಂಬದೆ ನಾ
ದರಿ ಜನರ ನಂಬುವುದುಂಟೆ

ಹಬ್ಬದಡಿಗೆಯ ಎಲ್ಲ
ನಾನೊಬ್ಬ ಳುಣುವುದುಂಟೆ

ಕಬ್ಬ ರಸವನು ನಾ
ಬರಿ ಗಬ್ಬು ಯೆನುವುದುಂಟೆ

ತಬ್ಬಿ ಹಿಡಿವ ಪತಿಯ
ಸದೆಬಡಿದಬ್ಬುವುದುಂಟೆ

ಮಬ್ಬು ಕವಿದಿಹ ಮನ
ಉಬ್ಬಿ ಕುಣಿದಿರುವುದುಂಟೆ

ಗೊಬ್ಬರದಾ ಮುಂದೆ
ದಿಬ್ಬಣ ಹಾಯ್ವುದುಂಟೆ

ಇಬ್ಬರು ಗಂಡರ ನಾ
ಬಿಗಿ ತಬ್ಬಿ ನಡೆವುದುಂಟೆ

ಇಬ್ಬಗೆಯಲಿರುವೆನು ನಾ
ಹೆಬ್ಬಯಕೆ ಹಿಡಿವುದುಂಟೆ

ಹರಿಯ ನಂಬದೆ ನಾ
ಸಿರಿಯ ನಂಬುವುದುಂಟೆ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಅಲಮಟ್ಟಿ ಅಣೆಕಟ್ಟನ್ನು ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ? ಇದು ಕರ್ನಾಟಕದ ಯಾವ ಜಿಲ್ಲೆಯಲ್ಲಿದೆ?

೨. ವೇದಾವತಿ ನದಿಗೆ ಚಿತ್ರದುರ್ಗ ತಾಲೂಕಿನ ಹಿರಿಯೂರಿನ ಸಮೀಪದಲ್ಲಿ ಕಟ್ಟಲಾಗಿರುವ ಜಲಾಶಯ ಯಾವುದು? ಇದರ ವಿಶೇಷತೆ ಏನು?

ಸರಿ ಉತ್ತರಕ್ಕೆ ಪುಟ ೧೯ ನೋಡಿ

ಒಗಟು – ಉತ್ತರ

೧. ಬೆರಣಿ ೨. ಮೂಗುತಿ

ಹಾಸ್ಯ ಚಿಲುಮೆ

ಮೇಷ್ಟ್ರು: "ಯಾವ ದ್ರವ್ಯವು ಕಾಯಿಸಿದಾಗ ಘನ ವಸ್ತು ಆಗುತ್ತದೆ?"

ಗುಂಡ:"ಇಡ್ಲಿ ಹಿಟ್ಟು ಸಾರ್"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ದನ ಕಾಯುವವನೇ ದೈತ್ಯನ ಸೊಕ್ಕನ್ನು ಅಡಗಿಸಿದ.

೨. ಕಾಯಲು ಹೋಗುತ್ತಿದ್ದವನನ್ನು ತಬ್ಬಿಬ್ಬುಗೊಳಿಸಿದ ಎರಡಾದ ದಾರಿ.

೩. ಎಲ್ಲರಂಥಹ ವ್ಯಕ್ತಿಯಲ್ಲಿಯೇ ಗೌರವಾನ್ವಿತನೂ ಸೇರಿಕೊಂಡಿದ್ದಾನೆ.

೪.ತಿಂಡಿಯೊಂದೇ ಸಾಕಾದರೂ ಅದರ ಜೊತೆಗೇ ಅಂಟಿಕೊಂಡಿರುವ ಇದರ ಕೆಲಸವೇನು ?

೫. ಹಿರಿಯ ಸಹೋದರಿಯ ಜೊತೆಗೇ ನೆರಹೊರೆಯವರೂ ಇದ್ದಾರೆ.

೬. ಬೃಹತ್ತಾಗಿ ಬೆಳೆದಿರುವ ವೃಕ್ಷ.

ಉತ್ತರ: ಬಿಸಿಲ ಬೇಗೆಗೆ ಬಳಲಿ, ತಂಪಾದ ಹಾದಿಬದಿಯ ನೆರಳಲ್ಲಿ ವಿರಮಿಸಿಕೊಳ್ಳುವಾಗ ನೆನಪಾದ ಅಕ್ಕ?

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಜನವರಿ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ನವೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಜೇಶ್ವರಿ ಜಯದೇವ್, ಸಿಡ್ನಿ
- ಕೆ. ಎಸ್. ಮಂಜುನಾಥ್, ಬೆಂಗಳೂರು
- ನಾಗೇಶ್ ಸಿ.ಎಂ, ಮೈಸೂರು
- ಪುಷ್ಪವಲ್ಲಿ ಚಂದ್ರಶೇಖರ್, ಬೆಂಗಳೂರು

ನವೆಂಬರ್ ತಿಂಗಳ ಪದಪುಂಜದ ಉತ್ತರ

೧. ಚಲಪತಿಗೆ ಆಗಾಗ್ಗೆ ತಿನ್ನಲು ಬಾಯಿಗೆ ಏನಾದರೂ ಹಾಕಿಕೊಳ್ಳುತ್ತಿರಬೇಕೆನ್ನುವ ಹವ್ಯಾಸ!

ಚ	ಪ	ಲ

೨. ಆತ ಒಂದೇ ನೋಟದಲ್ಲಿ ಆಕೆಯೆಡೆಗೆ ಸೆಳೆಯಲ್ಪಟ್ಟ.

ಆ	ಕ	ರ್ಷ	ತ

೩.ತಾವರೆಯಂತಹ ಮೊಗವುಳ್ಳವಳೆಂದು ಈಕೆಗೆ ಈ ಹೆಸರೇನು?

ಪಂ	ಕ	ಜ

೪. ಭಾರವಾದ ಅಕ್ಕಪಕ್ಕದವರು.

ನೆ	ರ	ಹೊ	ರೆ

೫. ಏನು ಭಾಗ್ಯವೋ, ಭಾರತದ ಈ ಪುರಾತನ ಆರೋಗ್ಯಸೂತ್ರ ಈಗ ಪ್ರಪಂಚದಾದ್ಯಂತ ಬಲು ಜನಪ್ರಿಯ.

ಯೋ	ಗ

೬. ಸಂಗೀತಗಾರರು ಹೊಗಳಿ ಭಜಿಸುವ ಗಣಪತಿ ಕನ್ನಡದ ಈ ಊರಿನವ.

ವಾ	ತಾ	ಪಿ

ಉತ್ತರ: ಸ್ವಾತಂತ್ರ್ಯಾನಂತರ ದೇಶದ ಅಭಿವೃದ್ಧಿಗಾಗಿ ಹಮ್ಮಿಕೊಂಡ ಐದೈದು ವರ್ಷಗಳ ಕಾರ್ಯಕ್ರಮ.

ಪಂ	ಚ	ವಾ	ರ್ಷಿ	ಕ	ಯೋ	ಜ	ನೆ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ- ನರೇಂದ್ರ, ಬೆಂಗಳೂರು

ಮಲ್ಲಿಗೆ ವನ ಮತ್ತು ಅಮ್ಮನ ತವರು

ಲೇಖಕರು:
ರಾಜೇಶ್ವರಿ ಜಯದೇವ್

ಬೆಳಗಿನ ಜಾವ, ಎಂದಿನಂತೆ ವಾಕಿಂಗ್ ಹೋಗುತ್ತಿದ್ದೆ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಮಲ್ಲಿಗೆಯ ನವಿರಾದ ಕಂಪು ತಂಗಾಳಿಯಲ್ಲಿ ತೇಲಿ ಬಂತು. ಅದರ ಸವಿಗೆ ಮನದಾಳದಲ್ಲಿ ಹುದುಗಿದ್ದ ನೆನಪೊಂದು ಮಿಸುಕಿತು. ವಸಂತ ಮಾಸ, ಎಲ್ಲೆಲ್ಲೂ ಅಚ್ಚ ಬಿಳುಪಿನ ಮಲ್ಲಿಗೆ ಅರಳಿ ಘಮಘಮಿಸುತಿತ್ತು. ನಿಧಾನವಾಗಿ, ಹೃದಯದಾಳಕ್ಕಿಳಿದ ಮಲ್ಲಿಗೆಯ ಕಂಪು, ಮನದಂಗಳದ ಮೂಲೆಯಲ್ಲಿ ಬೆಚ್ಚಗೆ ಕುಳಿತಿದ್ದ ನೆನಪನ್ನು, ಹಲವಾರು ವರ್ಷಗಳಿಂದ ನನಗರಿವಿಲ್ಲದಂತೆ ಕಾಪಾಡಿಕೊಂಡು ಬಂದ ನೆನಪಿನ ತಂತಿಯೊಂದನ್ನು, ಮೀಟಿತು.

ನೆನಪು, ಮಲ್ಲಿಗೆಯ ಸುವಾಸನೆಯನ್ನು ಸವಿದೊಡನೆಯೇ ನೀರಿನ ಕಾರಂಜಿಯಂತೆ, ಜೀವಂತಿಕೆಯಿಂದ ಪುಟಿದೆದ್ದ ನೆನಪು, ದೇಶ ದೇಶಗಳನ್ನು ದಾಟಿ, ಸಾಗರಗಳನ್ನು ಹಾಯ್ದು, ಸುಮಾರು ೬೦ ವರ್ಷಗಳಷ್ಟು ಹಿಂದಕ್ಕೆ, ನಾನು ನೆಲಸಿರುವ ಸಿಡ್ನಿಯಿಂದ ನಮ್ಮೂರು ಸಾಗರಕ್ಕೆ, ಸಾಗರದಿಂದ ಅಮ್ಮನ ತವರುಮನೆ ಕುಂದಾಪುರಕ್ಕೆ, ಅಲ್ಲಿರುವ ಅಜ್ಜಿಯ ಮನೆಗೆ, ಅಜ್ಜಿಯ ಮನೆಯಿಂದ ಮಲ್ಲಿಗೆ ವನಕ್ಕೆ ಕರೆದೊಯ್ದಿತು.

ನನಗಾಗ ಐದು ಅಥವಾ ಆರು ವರ್ಷಗಳಿರಬಹುದು. ನಾವು ಆರು ಜನ ಮಕ್ಕಳು, ನಾನೇ ಕೊನೆಯವಳು. ಬೇಸಿಗೆ ರಜದಲ್ಲಿ ನಾವು ಅಮ್ಮನೊಡನೆ ಕುಂದಾಪುರಕ್ಕೆ ಹೋಗುತಿದ್ದೆವು.

ಅಪ್ಪನ ದನಿ ನನಗೆ ಈಗ ಕೇಳಿದಂತಿದೆ. "ಹೊಳೆಯಪ್ಪಂಗೆ ನಾಳೆ ಕಾರ್ ತರಾಕೆ ಹೇಳ್ ಬಾ" ಅಪ್ಪ ಕೆಲಸದಾಳಿಗೆ ಹೇಳುತಿದ್ದರು. ಗಂಟೆ ಎಂಟಾದರೂ ಮಲಗಿದ್ದ ನನಗೆ ಗಕ್ಕನೆ ಎಚ್ಚರವಾಯಿತು. ಹಾಸಿಗೆಯಿಂದ ಹಾರಿ ಎದ್ದು, ಅಡಿಗೆಮನೆಗೆ ಓಡಿದೆ. ಅಮ್ಮ ಒಲೆಯ ಮುಂದೆ ಕುಳಿತು ರೊಟ್ಟಿ ಮಾಡುತ್ತಿದ್ದಳು. "ಅಮ್ಮ, ನಾವು ನಾಳೆ ಕುಂದಾಪುರಕ್ಕೆ ಹೋಗ್ತೀವಾ?" ಅಮ್ಮನ ಕುತ್ತಿಗೆಗೆ ಜೋತು ಬೀಳುತ್ತಾ ಕೇಳಿದೆ. ಅಮ್ಮ ಮೃದುವಾಗಿ ನಕ್ಕಳು. ಅವಳ ಕಣ್ಣುಗಳು ಹೊಳೆಯುತ್ತಿದ್ದವು. "ಹೂಂ ಪುಟ್ಟ, ಮುಖ ತೊಳ್ಕೊಂಡ್ ಬಾ, ರೊಟ್ಟಿ ಕೊಡ್ತೀನಿ". ಎಲ್ರಿಗೂ ಈ ವಿಷಯ ತಿಳಿಸಲು ಓಡಿದೆ. 'ಅರೆ, ಎಲ್ರಿಗೂ ಆಗ್ಲೇ ವಿಷಯ ಗೊತ್ತಾಗಿದೆಯಲ್ಲಾ'? ಎಲ್ಲರೂ ಬಟ್ಟೆಬರೆಗಳನ್ನು, ಇತರ ಸಾಮಾನುಗಳನ್ನು ಅಣಿ ಮಾಡಿಕೊಳ್ಳುತ್ತಿದ್ದರು. ಆ ರಾತ್ರಿಯೆಲ್ಲಾ ಸವಿ ಕನಸುಗಳು.

ಬೆಳಿಗ್ಗೆ ಎದ್ದಾಗ ಎಲ್ಲರೂ ಗಡಿಬಿಡಿಯಿಂದ ಹೊರಡಲು ತಯಾರಾಗುತ್ತಿದ್ದರು. ಎಲ್ಲೆಲ್ಲೂ ಉತ್ಸಾಹ, ಅವಸರ, ಸಂಭ್ರಮ. ಹೊಳೆಯಪ್ಪನ ಹಳೆಯ ಅಂಬಾಸಿಡರ್ ಕಾರು ಮನೆಯ ಮುಂದೆ ನಿಂತಿತ್ತು. ಅಪ್ಪ ಏರಿದ ದನಿಯಲ್ಲಿ ಹೊಳೆಯಪ್ಪನಿಗೆ ನಮ್ಮೆಲ್ಲರ ಬ್ಯಾಗು ಮತ್ತು ಇತರ ಸಾಮಾನುಗಳನ್ನು ಕಾರಿನ ಡಿಕ್ಕಿಯಲ್ಲಿ ಸರಿಯಾಗಿ ಜೋಡಿಸುವಂತೆ ಸಲಹೆ ನೀಡುತ್ತಾ "ಹೊತ್ತಾಗ್ ಹೋಯ್ತು, ಬೇಗ್ ಬೇಗ್ ಹೊರಡಿ" ಅಂತ ನಮ್ಮನ್ನು ಅವಸರಿಸುತ್ತಿದ್ದರು. ಹಕ್ಕಿಗಳಂತೆ ಕಚಪಿಚಗುಟ್ಟುತ್ತಿದ್ದ ನಮ್ಮನ್ನು ತುಂಬಿಕೊಂಡ ಕಾರು ಕುಂದಾಪುರಕ್ಕೆ ಹೊರಟಿತು.

ಕುಂದಾಪುರ ನಮ್ಮೂರು ಸಾಗರದಿಂದ ಸುಮಾರು ೨೦೦ ಕಿಲೋಮೀಟರ್ ದೂರದಲ್ಲಿದೆ. ಪಶ್ಚಿಮ ಘಟ್ಟದ ಕೆಳಗಿರುವ ಈ ಪುಟ್ಟ ಊರು ಸಮುದ್ರದ ದಂಡೆಯಲ್ಲಿದೆ.

ಹರಟೆ ಜಗಳಗಳಿಂದ ಶುರುವಾದ ಪ್ರಯಾಣ, ಕಾರು ಘಟ್ಟವನ್ನಿಳಿಯಲು ಶುರುಮಾಡಿದೊಡನೆಯೇ ಮೌನದಲ್ಲಿ ಸಾಗತೊಡಗಿತು. ನಮಗೆಲ್ಲ ನಿದ್ದೆಯ ಮಂಪರು ಕೂಡ. ಹಲವಾರು ಗಂಟೆಗಳ ನಂತರ ಇದ್ದಕ್ಕಿದ್ದಂತೆ "ಹಾಲಾಡಿ ಹೊಳೆ ಬಂತು, ಇಳೀರಿ" ಅನ್ನುವ ಧ್ವನಿ ಕೇಳಿ ಎಚ್ಚರವಾಯಿತು. ಪ್ರಯಾಣದಿಂದ ಸುಸ್ತಾಗಿದ್ದ ನಮಗೆ ನೀರಿನ ಮೇಲೆ ಬೀಸಿಬಂದ ಗಾಳಿ ಬಹಳ ಆಹ್ಲಾದಕರವೆನಿಸುತ್ತಿತ್ತು. ಬೇಸಿಗೆಯಲ್ಲಿ ಹೊಳೆಯಲ್ಲಿ ಬಹಳ ನೀರಿರುತ್ತಿರಲಿಲ್ಲ. ನಾವೆಲ್ಲಾ ಕಾರಿಳಿದು ಕಾಲ್ನಡಿಗೆಯಲ್ಲೇ ಹೊಳೆ ದಾಟುತ್ತಿದ್ದೆವು. ಒಂದೊಂದು ಸಲ, ನೀರು ನನ್ನ ಮೊಣಕಾಲಿಗಿಂತ ಮೇಲಕ್ಕೆ ಬರುವಷ್ಟಿರುತ್ತಿತ್ತು. ಆಗ ಅಂಬಿಗರು ನನ್ನನ್ನು ಎತ್ತಿಕೊಂಡು ಹೊಳೆ ದಾಟಿಸುತ್ತಿದ್ದರು. ನನಗಾಗ ಸಿಟ್ಟು, ನಾಚಿಕೆ. ಇದೇ ಚಾನ್ಸು ಅಂತ ಎಲ್ರೂ ನನ್ನ ಚುಡಾಯಿಸ್ತಾ ಇದ್ರು. ಕಾರನ್ನ ಹೊಳೆಯಲ್ಲಿ ಡ್ರೈವ್ ಮಾಡಿಕೊಂಡು ಹೋಗುವುದನ್ನ ಆಶ್ಚರ್ಯದಿಂದ, ಬಿಟ್ಟ ಕಣ್ಣು ಮುಚ್ಚದೆ ನೋಡುತ್ತಿದ್ದೆ. ಮತ್ತೆ ಎಲ್ಲರನ್ನೂ ತುಂಬಿಸಿಕೊಂಡ ಕಾರು ಕುಂದಾಪುರಕ್ಕೆ ಹೊರಡುತ್ತಿತ್ತು.

ಅಮ್ಮನ ತವರುಮನೆ ಕುಂದಾಪುರದ ಹೊರ ಬಡಾವಣೆಯಲ್ಲಿದೆ. ಮನೆ ಸಮೀಪಿಸುತ್ತಿದ್ದಂತೆ ಕಬ್ಬಿಣದ ದೊಡ್ಡ ಕಮಾನಿರುವ, ಕಮಾನಿನ ಮೇಲೆ 'ಶಾಂತಿನಿಕೇತನ' ಎಂದು ಬರೆದಿರುವ ಗೇಟು ಕಾಣುತ್ತದೆ. ಇಕ್ಕೆಡೆಯಲ್ಲಿರುವ ಮಾವು, ಹಲಸು, ಗೇರು ಮುಂತಾದ ಹಣ್ಣಿನ ಮರಗಳನ್ನು ದಾಟಿಕೊಂಡು ಕಾರು ಮುಂದೆ ಹೋಗುತ್ತಿದ್ದಂತೆ ಇದ್ದಕ್ಕಿದಂತೆ ವಿಶಾಲವಾದ ಜಗುಲಿ ಇರುವ ಚಿಕ್ಕ ಮನೆ ಕಣ್ಣಿಗೆ ಬೀಳುತ್ತದೆ. ಇದೇ ನಮ್ಮ ಮಾವನ ಮನೆ. ಮನೆಯ ಹಿಂದೆ ಬಟ್ಕಲ್ ಮಲ್ಲಿಗೆಯ ತೋಟ. ತೋಟದ ಹಿಂದಕ್ಕೆ ಸುಮಾರು ಐದು-ಆರು ಕಿಲೋಮೀಟರ್ ನಡೆದುಕೊಂಡು ಹೋದರೆ ಅರಬ್ಬಿ ಸಮುದ್ರದ ನೀಲಿ ನೀರು, ಬಿಳಿ ನೊರೆ ಕಾಣಿಸುತ್ತದೆ. ನೀರಿನ ಹತ್ತಿರ ಹೋಗಬಾರದೆಂದು ನಮಗೆಲ್ಲಾ ಕಟ್ಟಪ್ಪಣೆ ಮಾಡಿದ್ದರು. ಮರಗಳ ತುಂಬಾ ಹಣ್ಣುಗಳಿರುವುದನ್ನು ನೋಡಿ ನಮಗೆಲ್ಲಾ ತುಂಬಾ ಆಶ್ಚರ್ಯ. ಯಾರೂ ಇರದಿರುವಂತ ಸಮಯ ನೋಡಿ ಹಣ್ಣು ಕೀಳಲು ಹೋಗಿ ಬಯ್ಸಿಕೊಳ್ಳುತ್ತಿದ್ದೆವು. ಒಂದೊಂದು ದಿನ ನಮ್ಮ ಮಾವನ ಮಕ್ಕಳ ಜೊತೆ ಮಲ್ಲಿಗೆ ಹೂವು ಬಿಡಿಸಲು ಹೋಗುತ್ತಿದ್ದೆವು. ಅವರ ಹಾಗೆ ನಾವೂ ವೇಗವಾಗಿ ಮಲ್ಲಿಗೆ ಬಿಡಿಸಲು ಹೋಗಿ ಹೂವನ್ನೆಲ್ಲ ತರಿದು ಹಾಕಿಬಿಡುತ್ತಿದ್ದೆವು. ಸಣ್ಣ ಹಾವುಗಳು ಅಲ್ಲಲ್ಲಿ ಹರಿದಾಡುವುದ ನೋಡಿ ಕಿರುಚಿಕೊಳ್ಳುತ್ತಿದ್ದೆವು. ಅವುಗಳೇನೂ ಮಾಡುವುದಿಲ್ಲ ಅಂತ ಅತ್ತೆ, ಮಾವ ಹೇಳುತ್ತಿದ್ದರು.

ಮುಂದಿನ ಪುಟ ನೋಡಿ ...

ನಾವು ಸಾಗರದಲ್ಲಿ ಬಹಳ ಒತ್ತೊತ್ತಾಗಿರೋ ಮನೆಗಳಲ್ಲಿ ಬೆಳೆದಿರುವವರು. ನಮ್ಮನೆಯಲ್ಲಂತೂ ಕೊಟ್ಟಿಗೆಯ ತುಂಬಾ ದನಕರುಗಳು, ಮನೆ ತುಂಬಾ ಮಕ್ಕಳು ಮರಿ, ಬಂದು ಹೋಗುವ ಜನರೂ ಜಾಸ್ತಿ. ಹಾಗಾಗಿ ಅಮ್ಮನ ತವರುಮನೆ ಸ್ವರ್ಗ ಎಂದೆನಿಸುತ್ತಿತ್ತು. ದಿನವೆಲ್ಲ ಮಲ್ಲಿಗೆ ವನದಲ್ಲಿ ಗೊತ್ತು ಗುರಿಯಿಲ್ಲದೆ ಅಲೆಯುತ್ತಿದ್ದೆವು.

ಸಂಜೆಯ ಹೊತ್ತು ಎಲ್ಲರೂ ತೋಟದಿಂದ ಮನೆಗೆ ಬಂದಮೇಲೆ ದೊಡ್ಡವರೆಲ್ಲ ಅಡಿಗೆಮನೆ ಸೇರಿಕೊಳ್ಳುತ್ತಿದ್ದರು. ನಾವು ಮಕ್ಕಳೆಲ್ಲರೂ ಬಚ್ಚಲು ಮನೆಯಲ್ಲಿ ಒಲೆಯ ಸುತ್ತಲು ಕುಳಿತುಕೊಂಡು ಗೇರು ಹಣ್ಣು, ಉಪ್ಪು ಖಾರ ಹಚ್ಚಿದ ಮಾವಿನಕಾಯಿ ತಿನ್ನುತ್ತಾ ಹರಟೆ ಹೊಡೆಯುತ್ತಿದ್ದೆವು. ನಮ್ಮ ಅಜ್ಜಿ, ಮನೆಯಿಂದ ಬಚ್ಚಲುಮನೆಗೆ (ಸುಮಾರು ೧೦೦ ಮೀಟರ್ ದೂರ), ಬಚ್ಚಲುಮನೆಯಿಂದ ಮನೆಗೆ ಓಡಾಡುತ್ತಾ ಗೇರು ಬೀಜ, ಹಲಸಿನ ಹಪ್ಪಳ, ಗೆಣಸಿನ ಹಪ್ಪಳಗಳನ್ನು ಸರಬರಾಜು ಮಾಡುತ್ತಿದ್ದರು. ನಮ್ಮ ಮಾವನ ಮಕ್ಕಳು ಹೇಮ ಮತ್ತು ಗುಲಾಬಿ, ಹಪ್ಪಳಗಳನ್ನು ಕೆಂಡದಲ್ಲಿ ಸುಟ್ಟುಕೊಡುತ್ತಿದ್ದರು. ಒಮ್ಮೊಮ್ಮೆ ಗೇರುಕಾಯಿಗಳನ್ನು ಸುಟ್ಟು, ಹೊರಕವಚವನ್ನು ಕಲ್ಲಿನಲ್ಲಿ ಜಜ್ಜಿ ತೆಗೆದು ಒಳಗಿನ ಬೀಜವನ್ನು ನಮಗೆ ಕೊಡುತ್ತಿದ್ದರು. ಅದರ ರುಚಿ ವರ್ಣಿಸಲಸಾಧ್ಯ.. ಅಜ್ಜಿ ಬಂದು "ಊಟ ತಯಾರಾಯ್ತು, ಏಳಿ ಮಕ್ಕಾ" ಎಂದು ಹೇಳುವ ತನಕ ಬಚ್ಚಲುಮನೆ, ಹರಟೆ ಮತ್ತು ತಿಂಡಿಗಳೇ ನಮ್ಮ ಪ್ರಪಂಚವಾಗಿರುತ್ತಿತ್ತು. ಅತ್ತೆ, ಮಾವ, ಅಮ್ಮ ಸೇರಿಕೊಂಡು ಒಳ್ಳೇ ರುಚಿಕಟ್ಟಾದ ಊಟ ತಯಾರಿಸಿರುತ್ತಿದ್ದರು. ಎಲೆಯ ಮುಂದೆ ಕುಳಿತಕೊಡಲೇ, ಅತ್ತೆ ಮತ್ತು ಅಮ್ಮ ಬಗೆಬಗೆಯ ಪದಾರ್ಥಗಳನ್ನು ತಂದು ತಂದು ಬಡಿಸುತ್ತಿದ್ದರು. ನಾವೆಲ್ಲಾ ಮಾತಿಲ್ಲದೆ, ಹೊಟ್ಟೆ ಬಿರಿಯುವಂತೆ ಉಣ್ಣುತ್ತಿದ್ದೆವು.

ರಾತ್ರಿ ನಾವೆಲ್ಲರೂ ಹೊರ ಜಗುಲಿಯ ಮೇಲೆ ಮಲಗುತ್ತಿದ್ದೆವು. ಜಗುಲಿಯ ಮೇಲಿನ ತೊಲೆಗೆ ಸಾಲಾಗಿ ಮಗಿಸೌತೆಕಾಯಿಗಳನ್ನು ಕಟ್ಟಿರುತ್ತಿದ್ದರು. ನನಗೆ ನಿದ್ದೆ ಮಾಡಲು ಬಲು ಹೆದರಿಕೆ 'ಮಗಿಸೌತೆಕಾಯಿ ಮೈಮೇಲೆ ಬಿದ್ದುಬಿಡಬಹುದು, ಬೀದಿನಾಯಿ ಮೆಟ್ಟಲು ಹತ್ತಿಕೊಂಡು ಬಂದುಬಿಡಬಹುದು ಅಥವಾ ಮಲ್ಲಿಗೆ ವನದಲ್ಲಿ ಈ ದಿನ ನೋಡಿದ ಹಾವು ಮೆಲ್ಲಗೆ ಹರಿದುಕೊಂಡು ಹಾಸಿಗೆ ಹತ್ತಿರ ಬರಬಹುದು' ಎಂದು. 'ನಂಗೆ ಹೆದರಿಕೆಯಾಗುತ್ತಿದೆ' ಎಂದು ಪಕ್ಕದಲ್ಲಿ ಮಲಗಿದ್ದ ದೊಡ್ಡಕ್ಕನ ಹತ್ತಿರ ಪಿಸುಗುಟ್ಟುತ್ತಿದ್ದೆ. ಅಷ್ಟರಲ್ಲಿ ಅಜ್ಜಿ ಬಂದು "ನಿದ್ದೆ ಬಂತಾ ಮಕ್ಳೇ" ಎಂದು ಕೇಳುತ್ತಿದ್ದರು. "ಇಲ್ಲ" ಎಂದು ನಾವೆಲ್ಲರೂ ಒಕ್ಕೊರಳಿನಿಂದ ಹೇಳುತ್ತಿದ್ದೆವು. ಅಜ್ಜಿ ಕತೆ ಹೇಳುವುದಕ್ಕೆ ಬಂದಿದ್ದಾರೆ ಎಂದು ನಮಗೆ ಗೊತ್ತು.

ಏಳು ಮಲ್ಲಿಗೆ ಹೂವಿನ ತೂಕದ ರಾಜಕುಮಾರಿಯ ಕತೆ. ಸುಂದರಿಯಾದ ರಾಜಕುಮಾರಿಯನ್ನು ರಾಕ್ಷಸನೊಬ್ಬ ಮೋಹಿಸಿ, ಅಪಹರಿಸಿಕೊಂಡು ಹೋಗಿ, ಏಳು ಕಬ್ಬಿಣದ ಬಾಗಿಲುಗಳಿರುವ ಒಂದು ಕೋಟೆಯಲ್ಲಿ ಸೆರೆಯಲ್ಲಿಟ್ಟಿರುತ್ತಾನಂತೆ. ರಾಕ್ಷಸನು 'ತಾಕಡಿ, ಮಾಕಡಿ' ಎಂದು ಹೇಳಿಕೊಂಡು ಬಂದರೆ ಮಾತ್ರ ಏಳು ಬಾಗಿಲುಗಳು, ಒಂದೊಂದಾಗಿ ತೆರೆದುಕೊಳ್ಳುತ್ತಿದ್ದವಂತೆ. ದಿನಾ ರಾತ್ರಿ ಸೆರೆಮನೆಗೆ ಬಂದು 'ನನ್ನ ಮದುವೆಯಾಗು' ಎಂದು ರಾಜಕುಮಾರಿಯನ್ನು ಬಲವಂತ ಮಾಡುತ್ತಿದ್ದನಂತೆ. ಆ ರಾಕ್ಷಸನು ತನ್ನ ಪ್ರಾಣವನ್ನು ಒಂದು ಮುದ್ದಾದ ಗಿಳಿಯಲ್ಲಿಟ್ಟು, ಆ ಗಿಳಿಯನ್ನು ರಾಜಕುಮಾರಿಗೆ ಉಡುಗೊರೆಯಾಗಿ ಕೊಟ್ಟಿದ್ದನಂತೆ. ಒಂದು ದಿನ ಬೇಟೆಗೆ ಬಂದ ಒಬ್ಬ ರಾಜಕುಮಾರ ಆ ಕೋಟೆಗೆ ಬಂದು, ಗಿಳಿಯನ್ನು ಕೊಂದು, ರಾಜಕುಮಾರಿಯನ್ನು ಬಿಡಿಸಿಕೊಂಡು ಹೋಗುತ್ತಾನಂತೆ. ರಾಜಕುಮಾರ, ರಾಜಕುಮಾರಿಯನ್ನು ಮದುವೆಯಾಗುವುದರೊಳಗೆ ನಾವೆಲ್ಲರೂ ನಿದ್ದೆಹೋಗಿರುತ್ತಿದ್ದೆವು.

-೦-೦-

"ಹೊಳೆಯಪ್ಪಂಗೆ ನಾಳೆ ಕಾರ್ ತರಾಕೆ ಹೇಳ್ ಬಾ" ಅಪ್ಪ ಕೆಲಸದಾಳಿಗೆ ಹೇಳುತಿದ್ದರು. ಸಂಜೆ ಅದೇ ತಾನೇ ಸ್ಕೂಲಿನಿಂದ ಬಂದಿದ್ದೆ. ಅಪ್ಪ ಹೇಳುವುದು ಕೇಳಿ ಬಹಳ ಆಶ್ಚರ್ಯವಾಯ್ತು. 'ನಾವು ಈಗ್ಯಾಕೆ ಕುಂದಾಪುರಕ್ಕೆ ಹೋಗ್ತಾ ಇದೀವಿ? ಬೇಸಿಗೆ ರಜ ಇನ್ನೂ ಬಂದಿಲ್ವಲ್ಲ'? ಸ್ಕೂಲ್ ಬ್ಯಾಗನ್ನ ಬಿಸಾಡಿ, ಅಡಿಗೆಮನೆಗೆ ಓಡಿದೆ. ಸೋದರತ್ತೆ ಸಾವಿತ್ರಮ್ಮ ಒಲೆ ಮುಂದೆ ಕುಳಿತುಕೊಂಡು ಟೀ ಮಾಡುತ್ತಿದ್ದರು. 'ಅಮ್ಮ ಎಲ್ಲಿ'? ಅಮ್ಮ ಒಲೆ ಎದುರುಗಡೆ ಇದ್ದ ಗೋಡೆಗೆ ಒರಗಿ ಕುಳಿತುಕೊಂಡು, ಅತ್ತೆಗೆ ಅಡಿಗೆಮನೆಯಲ್ಲಿದ್ದ ಸಾಮಾನುಗಳನ್ನು ತೋರಿಸುತ್ತಾ ಸಣ್ಣ ದನಿಯಲ್ಲಿ ಏನೇನೋ ಹೇಳುತ್ತಿದ್ದಳು. ಅಮ್ಮ ತುಂಬಾ ಸುಸ್ತಾದವಳಂತೆ ಕಂಡಳು. "ಅಮ್ಮ, ನಾವು ನಾಳೆ ಕುಂದಾಪುರಕ್ಕೆ ಹೋಗ್ತೀವಾ?" ಅಮ್ಮನ ಕುತ್ತಿಗೆಗೆ ಜೋತು ಬೀಳುತ್ತಾ ಕೇಳಿದೆ. ಉತ್ತರ ಬರಲಿಲ್ಲ. ಕತ್ತೆತ್ತಿ ನೋಡಿದೆ. 'ಅಮ್ಮನ ಕಣ್ಣಲ್ಲಿ ಯಾಕೆ ನೀರು? ಕುಂದಾಪುರಕ್ಕೆ ಹೋಗಲು ಇಷ್ಟ ಇಲ್ವಾ'? "ಈ ಸಲ ನಾನೊಬ್ಳೇ ಹೋಗ್ತೀನಿ. ನೀನು ಅತ್ತೆ ಹೇಳ್ದಾಗೆ ಕೇಳ್ಕೊಂಡು, ಒಳ್ಳೇ ಹುಡುಗಿಯಾಗಿರಬೇಕು", ಅಮ್ಮ ನನ್ನ ಅಪ್ಪಿಕೊಂಡು, ಬೆನ್ನು ಸವರುತ್ತಾ ಹೇಳಿದಳು. "ನಾನೂ ನಿಂಜೊತೆ ಬರ್ತೀನಮ್ಮಾ" ಅಳುವ ದನಿಯಲ್ಲಿ ಕೇಳಿದೆ. ಉತ್ತರ ಬರಲಿಲ್ಲ.

ಆ ದಿನ ಸಂಜೆ ಅಮ್ಮನ್ನ ನೋಡೋಕೆ ಬಹಳ ಜನ ಬಂದರು. ಎಲ್ಲರೂ ಸಣ್ಣ ದನಿಯಲ್ಲಿ ಮಾತಾಡಿಕೊಳ್ಳುತ್ತಿದ್ದರು – ಅಮ್ಮನ ಅಸ್ತಮಾ ತುಂಬಾ ಉಲ್ಬಣಿಸಿಬಿಟ್ಟಿದೆಯಂತೆ. ಇವತ್ತು ಬೆಳಿಗ್ಗೆ ಡಾಕ್ಟರ್ ನೋಡೋಕೆ ಹೋಗಿದ್ದರಂತೆ. ಶುದ್ಧವಾದ ವಾತಾವರಣವಿರುವ, ಗಾಳಿ, ಬೆಳಕು ಚೆನ್ನಾಗಿರುವ, ದೂಳಿಲ್ಲದ ಜಾಗದಲ್ಲಿದ್ದರೆ ಅಸ್ತಮ ಹತೋಟಿಗೆ ಬರಬಹುದು ಎಂದು ಡಾಕ್ಟರು ಹೇಳಿದರಂತೆ. ಸಮುದ್ರದ ಪಕ್ಕದಲ್ಲಿರುವ ಕುಂದಾಪುರ, ಮಲ್ಲಿಗೆವನದಲ್ಲಿರುವ ಅಮ್ಮನ ತವರುಮನೆ ಸರಿಯಾದ ಸ್ಥಳ, ಅಮ್ಮ ಅಲ್ಲಿ ಸ್ವಲ್ಪ ದಿನ ಕಳೆಯುವುದು ಒಳ್ಳೆಯದು ಎಂದು ಅಪ್ಪ ನಿಶ್ಚಯಿಸಿದರಂತೆ.

ಮರುದಿನ ಬೆಳಿಗ್ಗೆ ಅಮ್ಮ ಕುಂದಾಪುರಕ್ಕೆ ಹೋದಳು.

-೦-೦-

ಮುಂದಿನ ಪುಟ ನೋಡಿ ...

"ಹೊಳೆಯಪ್ಪಂಗೆ ನಾಳೆ ಕಾರ್ ತರಾಕೆ ಹೇಳ್ ಬಾ" ಅಪ್ಪ ಕೆಲಸದಾಳಿಗೆ ಹೇಳುತಿದ್ದರು. ಊಟ ಮುಗಿಸಿ ಮಲಗಿಕೊಳ್ಳಲು ಸಿದ್ದವಾಗುತ್ತಿರುವಾಗ ಅಪ್ಪನ ಈ ಮಾತು ಕೇಳಿ, ಹೃದಯ ಒಂದು ಕ್ಷಣ ನಿಂತಂತಾಯ್ತು – ಅಮ್ಮನ್ನ ನೋಡೋಕೆ ಕುಂದಾಪುರಕ್ಕೆ ಹೋಗ್ತೀವಿ. ಆದ್ರೆ ಬೇಸಿಗೆ ರಜ ಇನ್ನೂ ಬಂದಿಲ್ಲವಲ್ಲಾ? ಆದರೇನಂತೆ. ಹಾರುತ್ತಾ, ನೆಗೆಯುತ್ತಾ ಅಡಿಗೆಮನೆಗೆ ಓಡಿದೆ. ಅಕ್ಕಪಕ್ಕದ ಮನೆಯವರೆಲ್ಲ ಅಲ್ಲಿ ಸೇರಿದ್ದರು. ಎಲ್ಲರ ಕಣ್ಣಲ್ಲೂ ನೀರು, ಮೌನ ಮತ್ತು ವ್ಯಥೆ. ಯಾಕೆ? ನಾನು ಮೆಲ್ಲಗೆ ನುಸುಳುತ್ತಾ ದೊಡ್ಡಕ್ಕನ ಬಳಿ ಹೋಗಿ "ನಾವು ನಾಳೆ ಕುಂದಾಪುರಕ್ಕೆ ಹೋಗ್ತೀವಾ?" ಎಂದು ಪಿಸುಗುಟ್ಟಿದೆ. ಅವಳು 'ಹುಂ' ಅನ್ನುವಂತೆ ತಲೆ ಅಲ್ಲಾಡಿಸಿದಳು. ಕಣ್ಣೀರು ಅವಳ ಕೆನ್ನೆಯ ತುಂಬಾ ಹರಿಯುತ್ತಿತ್ತು. ಆ ರಾತ್ರಿಯೆಲ್ಲಾ ಅರ್ಥವಿಲ್ಲದ ಕನಸುಗಳು.

ಈ ಸಲದ ಪ್ರಯಾಣ ಏನೂ ಮಜಾ ಇರಲಿಲ್ಲ. ಅಪ್ಪ ಕೂಡ ನಮ್ಮ ಜೊತೆ ಇದ್ದರು. ಎಲ್ಲರೂ ಸುಮ್ಮನೆ ಮರಗಿಡಗಳನ್ನೋ, ರಸ್ತೆಯನ್ನೋ ನೋಡುತ್ತಾ ಕುಳಿತ್ತಿದ್ದರು. 'ಸದ್ಯ, ಅಳುತ್ತಿಲ್ಲವಲ್ಲ'. ಮಳೆಗಾಲ. ಹಾಲಾಡಿ ಹೊಳೆ ತುಂಬಿ ಹರಿಯುತ್ತಿತ್ತು. ನಾವೆಲ್ಲರೂ ದೋಣಿಯಲ್ಲಿ ಹೊಳೆ ದಾಟಿದೆವು. ಎರಡು ದೋಣಿಯ ಮಧ್ಯೆ ಒಂದು ದೊಡ್ಡ ಮರದ ಹಲಗೆಯನ್ನಿಟ್ಟು ಕಾರನ್ನು ಆ ಹಲಗೆಯ ಮೇಲೆ ಹತ್ತಿಸಿದರು. ಅಂಬಿಗರು ಹುಟ್ಟುಹಾಕುತ್ತಾ ದೋಣಿಯನ್ನೂ, ಅದರೊಂದಿಗೆ ಕಾರನ್ನೂ ಆಚೆ ದಡಕ್ಕೆ ಸಾಗಿಸುವಾಗ ನಾನಂತೂ ರೆಪ್ಪೆ ಮಿಟುಕಿಸದೆ ನೋಡುತ್ತಿದ್ದೆ. ಆದರೆ ಇನ್ನ್ಯಾರಿಗೂ ಇದರಲ್ಲಿ ಆಸಕ್ತಿ ಇರಲಿಲ್ಲ. ಹೊಳೆ ದಾಟಿದ ಕೂಡಲೆ ಮತ್ತೆ ಕಾರ್ ಹತ್ತಿ ಕುಂದಾಪುರ ತಲುಪಿದೆವು. ಗೇಟನ್ನು ದಾಟುತ್ತಿದ್ದಂತೆ ಬಿಕೋ ಎನ್ನುವ ಮೌನ ಸ್ವಾಗತ.

ಅಮ್ಮ ಜಗುಲಿಯ ಮೇಲೆ ಮಲಗಿಕೊಂಡಿದ್ದಳು. ಅಜ್ಜಿ, ಅತ್ತೆ, ಮಾವ, ಮಾವನ ಮಕ್ಕಳು ಇನ್ನೂ ಯಾರೂ ಯಾರೋ ಬಹಳ ಜನ ಅಮ್ಮನ ಸುತ್ತ ಕುಳಿತಿದ್ದರು. ನಾವೂ ಗೋಡೆಗೆ ಒರಗಿ ಕುಳಿತುಕೊಂಡೆವು. ನನಗಂತೂ ಬಹಳ ಹೆದರಿಕೆ. ಎಲ್ಲರ ಮುಖ ನೋಡಿದೆ. ಎಲ್ಲರೂ ಅಳುತ್ತಿದ್ದರು. 'ಅಮ್ಮಂಗೆ ಏನಾಗಿದೆ? ನನಗ್ಯಾಕೆ ಅಳು ಬರ್ತಾ ಇಲ್ಲಾ? ಎಂಥಾ ನಾಚಿಗ್ಗೇಡು'. ಕಣ್ಣು ಉಜ್ಜಿ, ಉಜ್ಜಿ ನೀರು ತರಿಸಲು ಪ್ರಯತ್ನಪಟ್ಟೆ.

ಆ ಸಂಜೆ ಅಮ್ಮನನ್ನು ಮಲ್ಲಿಗೆ ವನಕ್ಕೆ ಒಯ್ದು, ಮಲ್ಲಿಗೆ ಗಿಡಗಳ ಮಧ್ಯೆ ತೋಡಿದ್ದ ಗುಂಡಿಯಲ್ಲಿ ಇಟ್ಟರು. ಗುಂಡಿಯನ್ನು ಮಣ್ಣಿನಿಂದ ತುಂಬಿ ಎರಡು ಮಲ್ಲಿಗೆ ಗಿಡಗಳನ್ನು ಅದರ ಮೇಲೆ ನೆಟ್ಟರು. ▪

ಡಾಕ್ಟರ್ ಚಂದ್ರಶೇಖರ್ ಅವರು ೧೯೩೫ರಲ್ಲಿ ಚಿತ್ರದುರ್ಗ ತಾಲೂಕಿನ ತಾಳ್ಯ ಎಂಬ ಗ್ರಾಮದಲ್ಲಿ ಜನಿಸಿದರು. ಅವರು ೧೯೬೬ರಲ್ಲಿ ತಮ್ಮ ವೈದ್ಯಕೀಯ ಶಿಕ್ಷಣವನ್ನು ಪೂರ್ತಿಗೊಳಿಸಿದರು. ಅದೇ ವರ್ಷ ಕರ್ನಾಟಕ ಸರ್ಕಾರದ ಸರ್ಕಾರಿ ವೈದ್ಯರಾಗಿ ನೇಮಕಗೊಂಡು ೧೯೭೧ರ ತನಕ ಹಲವಾರು ಗ್ರಾಮಗಲ್ಲಿ, ಜಿಲ್ಲೆಗಳಲ್ಲಿ ಜನರ ಸೇವೆ ಸಲ್ಲಿಸಿದರು.

೧೯೭೧ ರಲ್ಲಿ ತಮ್ಮ ಪತ್ನಿ ನಿರ್ಮಲ ಹಾಗೂ ಒಬ್ಬನೇ ಪುತ್ರನಾದ ಸಂತೋಷ್ ಜೊತೆಗೆ ಆಸ್ಟ್ರೇಲಿಯಾಗೆ ವಲಸೆ ಬಂದರು. ಆಗ ಆಸ್ಟ್ರೇಲಿಯಾದಲ್ಲಿ ವೈದ್ಯರಿಗೆ ತುಂಬಾ ಬೇಡಿಕೆಯಿತ್ತು. ವೈದ್ಯರನ್ನು ಬರಮಾಡಿಕೊಳ್ಳಲು ಆ ಪ್ರಾಂತ್ಯದ ಮೇಯರ್ ಖುದ್ದಾಗಿ ಏರ್ಪೋರ್ಟ್ ಗೆ ಬಂದು ಆಹ್ವಾನಿಸುತ್ತಿದ್ದರು.

ಆಸ್ಟ್ರೇಲಿಯಾದಲ್ಲಿ ಅವರು ತಮ್ಮ ಮೊದಲ ವೈದ್ಯಕೀಯ ಹುದ್ದೆಯನ್ನು hunter valley cessknock ಆಸ್ಪತ್ರೆಯಲ್ಲಿ ಶುರು ಮಾಡಿದರು.೧೯೭೩ ರಿಂದ ೧೯೭೪ರ ತನಕ Canterburry ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ೧೯೭೪ ರಿಂದ ೨೦೧೨ ರ ತನಕ northmead, Liverpool,Bankstown ಹೀಗೆ ಹಲವಾರು suburbs hospitalನಲ್ಲಿ G.P ಯಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ವೈದ್ಯರಾಗಿ ಅವರ ಸೇವೆ ಮೆಡಿಕಲ್ ಸೈನ್ಸ್ ಗೆ ಮಾತ್ರ ಸೀಮಿತವಾಗಿರದೆ ಅವರು ತಮ್ಮ ಕನ್ನಡ ಸ್ನೇಹಿತರೊಡನೆ ಕನ್ನಡ ಪಿಕ್ನಿಕ್ ಅಂತ ಕನ್ನಡದ ಸೇವೆಯನ್ನು ಶುರುಮಾಡಿಕೊಂಡ್ರು. ಯಾರೇ ಕನ್ನಡದವರು ಬಂದರೂಅವರಿಗೆ ಮಾರ್ಗದರ್ಶನ ಮಾಡಿ ಅವರಿಗೆ ತಂಗಲು ವ್ಯವಸ್ಥೆ ಮಾಡುತ್ತಿದ್ದರು.

ಇದು ಅವರು ಹಾಗೂ ಅವರ ಕೆಲವೇ ಕನ್ನಡ ಸ್ನೇಹಿತರು ಕಟ್ಟಿದ ಮೊದಲ ಕನ್ನಡ ಸಂಘ.

ಆಸ್ಟ್ರೇಲಿಯಾದಲ್ಲಿ ಇದ್ದರೂ ಅವರು ಯಾವತ್ತೂ ತನ್ನ ತಾಯಿನಾಡನ್ನು ಮರೆತಿರಲಿಲ್ಲ. ಅವರ ಮನಸು ಸದಾ ಅವರು ಹುಟ್ಟಿ ಬೆಳೆದ ನಾಡಿನ ಋಣ ಹೇಗೆ ತೀರಿಸುವುದು ಎಂದು ಯೋಚಿಸುತ್ತಿದ್ದರು ಹಾಗೂ ಹಲವಾರು ಮಠಧ ಸ್ವಾಮೀಜಿಗಳೊಡನೆ ಸಮಾಲೋಚಿಸುತ್ತಿದ್ದರು. ಅನೇಕ ಬಾರಿ ಆವರಿಗೆ M.L.A. ಚುನಾವಣೆಗಳಿಗೆ ಆಹ್ವಾನ ಬಂದರೂ ಅಧಿಕಾರದ ಆಸೆಗೆ ಎಂದೂ ಹಾತೊರೆಯಲಿಲ್ಲ. ಅವರು ಅವರ ತಮ್ಮನನ್ನು ಪ್ರೋತ್ಸಾಹಿಸಿ ಅವರನ್ನು M.L.A ಚುನಾವಣೆಯಲ್ಲಿ ಗೆಲ್ಲಿಸಿ ಅವರ ಮೂಲಕ ಜನ ಸೇವೆ ಸಲ್ಲಿಸಿದರು. ಅವರು ಹಾಲವಾರು ಗ್ರಾಮಗಳಲ್ಲಿ ವಿದ್ಯಾಸಂಸ್ಥೆಗಳನ್ನು ಕಟ್ಟಲು ಸಹಾಯ ಮಾಡಿದರು.

೧೯೮೧ರಲ್ಲಿ ತಾವು Sydney ಕನ್ನಡ radio programನಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕನ್ನಡದ ಹಾಗೂ ಭಾರತ ಸಮುದಾಯದ ಜನರಿಗೆ ಹಲವಾರು ರೀತಿಯಲ್ಲಿ ಸಹಾಯ ಮಾಡಿರುವರು. ಯಾರಾದರೂ ವೃದ್ಧ ಪೋಷಕರು ಆರೋಗ್ಯ ತಪ್ಪಿದ್ದಾಗ ಅವರ ಮನೆಗೆ ಹೋಗಿ ಅವರನ್ನು ಚೆಕಿತ್ಸೆ ಮಾಡಿ ಉಚಿತ ಔಷಧಿಯನ್ನು ಕೂಡ ಕೊಟ್ಟು ಅವರು ಸಂಪೂರ್ಣ ಗುಣಮುಖವಾಗುವವರೆಗೂ ಅವರನ್ನು ವಿಚಾರಿಸಿಕೊಳ್ಳುತ್ತಿದ್ದರು.

ಹೀಗೆ ಅವರ ವಿಷಯ ಹೇಳಲು ಪದಗಳು ಸಾಕಾಗೋದಿಲ್ಲ. ಅವರ ಸರಳ ಹಾಗೂ ಸ್ನೇಹ ಮನೋಭಾವ ಎಲ್ಲರನ್ನೂ ಅವರ ಬಳಿಗೆ ಆಕರ್ಷಿಸುತಿತ್ತು. ಅವರ ಬಳಿ ಮಾತಾಡಲು ಯಾವ ವಿಷಯವಾದರೂ ಸರಿ ತಾಸಾಗಲು ಸಾಲುತ್ತಿರಲ್ಲಿಲ್ಲ. ಅವರ ನೆಚ್ಚಿನ ವಿಷಯ Cricket and Politics. ಅವರ favourite cricket teams India, South Africa. ಅವರ ವಿಚಾರದ ಆಳ ಎಷ್ಟಿತ್ತೆಂದರೆ ಯಾವ ಪ್ಲೇಯರ್ ಎಷ್ಟು ರನ್ ಗಳಿಸಿದ ಎಷ್ಟು ವಿಕೆಟ್ ಕಬಳಿಸಿದ, ಎಲ್ಲಿ ಯಾವಾಗ ಯಾವ ಹೇಳಿಕೆಕೊಟ್ಟ ಎಂಬ ಕೂಲಂಕುಷ ವಿವರಗಳು ಅವರ ಬಳಿ ಲಭ್ಯವಿದ್ದವು.

೨೦೧೧ ರಲ್ಲಿ ಅವರ ವೈದ್ಯಕೀಯ ಹಾಗೂ ಸಮುದಾಯದ ಸೇವೆಗೆ ಆಗಿನ NSW premier ಆಗಿದ್ದ Kristina Keneally ಅವರು ಅವರಿಗೆ ಸತ್ಕರಿಸಿದರು. ಅದೇ ವರ್ಷ ಅವರಿಗೆ ಬಸವ ಶ್ರೀ ಪುರಸ್ಕಾರವನಿತ್ತು ಗೌರವಿಸಲಾಯಿತು.

ಡಾಕ್ಟರ್ ಚಂದ್ರಶೇಖರ್ ಅವರು ೨೨ ಡಿಸೆಂಬರ್ ೨೦೧೬ ಬೆಳ್ಳಿಗಿನ ಜಾವ ೪.೩೦ರ ಸಮಯಕ್ಕೆ ವಿಧಿವಶರಾದರು. ಅವರು ನಮ್ಮನ್ನಗಲಿ ಹೋದರೂ, ಅವರ ನೆನಪುಗಳು ನಮಲ್ಲಿ ಸಾದಾ ಜೀವಂತವಾಗಿರುವುದು. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆ ಭಗವಂತನಲ್ಲಿ ನಮ್ಮೆಲ್ಲರ ಕೋರಿಕೆ ▪

ನೀವು ಮಾಡಿ

ಮನೆಯ ಒಳಗೆ ಮಳೆ !

ಸಂಗ್ರಹ: ಬದರಿ ತ್ಯಾಮಗೊಂಡ್ಲು

ನಿಸರ್ಗದಲ್ಲಿ ಬೀಳುವ ಮಳೆಯು ಹೇಗೆ ಉಂಟಾಗುತ್ತದೆ ಎಂದು ಈ ಸರಳ ಪ್ರಯೋಗದಿಂದ ತಿಳಿಯೋಣ!

ಬೇಕಾಗುವ ಸಾಮಗ್ರಿ

- ಒಂದು ಗಾಜಿನ ಲೋಟ/ಬಾಟಲಿ
- ಒಂದು ಪ್ಲಾಸ್ಟಿಕ್ ಪ್ಲೇಟ್
- ಕುದಿಯುವ ನೀರು (ಕಾಲು ಲೋಟ)
- ಮಂಜುಗಡ್ಡೆ - 10 (ICE-CUBES)

ವಿಧಾನ

ಲೋಟದ ಕಾಲುಭಾಗದಷ್ಟು ಬಿಸಿನೀರನ್ನು ತುಂಬಿ ಮುಚ್ಚಳವಾಗಿ ಪ್ಲೇಟ್ ಒಂದನ್ನು ಮುಚ್ಚಿ.
ಒಂದು ನಿಮಿಷ ಹಾಗೆ ಬಿಟ್ಟು, ನಂತರ ಪ್ಲೇಟ್ ಮೇಲೆ ಮಂಜುಗಡ್ಡೆಗಳನ್ನು ಇಟ್ಟು ಏನಾಗುವುದೆಂದು ವೀಕ್ಷಿಸಿ.
ಒಂದಷ್ಟು ನಿಮಿಷಗಳಾದ ಮೇಲೆ ಮಳೆ ಹನಿಗಳಂತೆ ಲೋಟದ ಒಳಭಾಗದಲ್ಲಿ ನೀರಿನ ಬಿಂದುಗಳು ಇಳಿಯಲಾರಂಭಿಸುತ್ತದೆ.

ಏನಾಗುತ್ತಿದೆ

ಲೋಟದೊಳಗಿನ ಉಷ್ಣ ನೀರಿನಿಂದ ಗಾಳಿಯು ಬೆಚ್ಚಗಾಗಿ ಪ್ಲೇಟ್ ಹತ್ತಿರ ಹೋಗುತ್ತದೆ. ಪ್ಲೇಟ್ ಮೇಲಿರುವ ಮಂಜುಗಡ್ಡೆಯು ಲೋಟದೊಳಗಿನ ಬೆಚ್ಚಗಿನ ಗಾಳಿಯಲ್ಲಿನ ತೇವಾಂಶವನ್ನು ಹೆಚ್ಚು ಸಾಂದ್ರವಾಗುವಂತೆ ಮಾಡಿ ನೀರಿನ ಹನಿಗಳಾಗಿ ಮಾಡಿ ಕೆಳಗೆ ಇಳಿಯುವಂತೆ ಮಾಡುತ್ತದೆ. ಮಳೆ ಬರುವುದೂ ಹೀಗೆಯೇ. ವಾತಾವರಣದಲ್ಲಿನ ಉಷ್ಣ ಮತ್ತು ತೇವಾಂಶದ ಗಾಳಿಯು ಗಗನದಲ್ಲಿನ ಶೀತ ಗಾಳಿಯೊಡನೆ ಬೆರೆತು ನೀರಿನ ಹನಿಯಾಗಿ ಮಳೆಯಾಗಿ ಕೆಳಗೆ ಬೀಳುತ್ತದೆ. ▪

ಜಾಣ ಕರ್ನಾಟಕ – ಉತ್ತರ

೧. ಅಲಮಟ್ಟಿ ಅಣೆಕಟ್ಟನ್ನು ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಇದು ವಿಜಯಪುರ (ಬಿಜಾಪುರ) ಜಿಲ್ಲೆಯಲ್ಲಿದೆ.
೨. ವಾಣೀವಿಲಾಸ ಸಾಗರ ಅಥವಾ ಮಾರೀಕಣಿವೆ. ಇದು ಕರ್ನಾಟಕದ ಮೊದಲ ಜಲಾಶಯವೆಂಬ ಹೆಗ್ಗಳಿಕೆ ಪಡೆದಿದೆ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕನ್ನಡ KARAOKE

07/01/2017

VENUE: Wattle Grove Public School, Cressbrook Drive, Wattle Grove, NSW

ಆಸಕ್ತ ಗಾಯಕರು, ಸಂಗೀತ ಪ್ರೇಮಿಗಳು sugamakannada@gmail.com ಗೆ ಇಮೇಲ್ ಮಾಡಿ

KANNADA CRASH COURSE

21st and 22nd January 2017

Venue: Toongabbie East Public School, Harris Street, Wentworthville, NSW 2145

ಆಸಕ್ತರು sugamakannada@gmail.com / sydneykannadaschool@gmail.com ಗೆ ಇಮೇಲ್ ಮಾಡಿ

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.